# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಅಕ್ಟೋಬರ್ 31, 2024

ಸಂಪುಟ : 51 ಸಂಚಿಕೆ : 168 ☎ 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com




## ಮಾನವ ಜನ್ಮ ಸಾರ್ಥಕಪಡಿಸಿಕೊಳ್ಳದಿದ್ದರೆ ಬದುಕು ವ್ಯರ್ಥ

**ಮಾಗನೂರು ಬಸಪ್ಪ ಸ್ಮರಣೆ ಕಾರ್ಯಕ್ರಮದಲ್ಲಿ ಹಾಸನ - ಕೊಡಗು ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ**

ದಾವಣಗೆರೆ, ಅ. 30- ಮನುಷ್ಯ ಜನ್ಮ ಅತ್ಯಂತ ಶ್ರೇಷ್ಠವಾದುದು. ಅದನ್ನು ಸಾರ್ಥಕಪಡಿಸಿಕೊಳ್ಳದಿದ್ದರೆ ಬದುಕು ವ್ಯರ್ಥವಾಗುತ್ತದೆ. ಕಾಯಕ ಮತ್ತು ದಾಸೋಹ ತತ್ವವನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಂಡ ಮಹಾನ್ ಶರಣರ ಸಾಲಿಗೆ ಲಿಂ. ಮಾಗನೂರು ಬಸಪ್ಪ ಕೂಡ ಸೇರುತ್ತಾರೆಂದು ಹಾಸನ-ಕೊಡಗು ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದ ಆವರಣದಲ್ಲಿ ಆರೂಢ ದಾಸೋಹಿ, ಮಹಾಶರಣ ಲಿಂ. ಮಾಗನೂರು ಬಸಪ್ಪನವರ 29 ನೇ ಹಾಗೂ ಶರಣೆ ಲಿಂ. ಸರ್ವಮಂಗಳಮ್ಮ ಮಾಗನೂರು ಬಸಪ್ಪ ಅವರ 16 ನೇ ವಾರ್ಷಿಕ ಪುಣ್ಯಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪೂಜೆಗಿಂತ ಕಾಯಕ ದೊಡ್ಡದು ಎಂಬುದನ್ನು ಮಾಗನೂರು ಬಸಪ್ಪ ಅವರು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಮನುಷ್ಯನಾಗಿ ಹುಟ್ಟಿದ ಮೇಲೆ ಪುಣ್ಯದ ಕೆಲಸ ಮಾಡಲು ಸಾಧ್ಯವಾಗದಿದ್ದರೆ ಇನ್ನೊಬ್ಬರಿಗೆ ಕೆಡುಕು ಉಂಟು ಮಾಡುವ, ತೊಂದರೆ ಕೊಡುವ ಕೆಲಸ ಮಾಡಬಾರದು ಎಂಬುದೇ ಎಲ್ಲಾ ಧರ್ಮಗಳ ಮೂಲ ಉದ್ದೇಶ ಎಂದರು.

ಭಗವಂತ ಕೊಟ್ಟ ಅವಕಾಶಗಳನ್ನು ಸುಂದರವಾಗಿ ಸಾರ್ಥಕಪಡಿಸಿಕೊಳ್ಳದಿದ್ದರೆ ಬದುಕು ವ್ಯರ್ಥವಾಗುತ್ತದೆ. ಮಾಗನೂರು ಬಸಪ್ಪ ಅವರ ಕೆಲಸಗಳು ಸ್ಮರಣೀಯವಾದವು. ಇಂತಹ ವ್ಯಕ್ತಿಗಳು ಪ್ರಾತಃಸ್ಮರಣೀಯರು ಎಂದು ಕರೆಯಲ್ಪಡುತ್ತಾರೆ. ಜನ ಮಾನಸದಲ್ಲಿ ಉಳಿಯುವಂತಹ ಕಾರ್ಯಗಳನ್ನು ಮಾಗನೂರು ಬಸಪ್ಪ ಮಾಡಿದ್ದಾರೆಂದು ಹೇಳಿದರು.

ಹುಟ್ಟು - ಸಾವಿನ ನಡುವಿನ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕಾಗಿದೆ. ಧರ್ಮದ ಬುತ್ತಿಯನ್ನು ಪರಲೋಕಕ್ಕೆ ಹೋಗುವಾಗ ಕಟ್ಟಿಕೊಂಡು ಹೋಗಬೇಕಾಗಿದೆ. ಪರರಿಗೆ ಉಪಕಾರ ಮಾಡುವ ಗುಣವನ್ನು ಮೈಗೂಡಿಸಿಕೊಳ್ಳಬೇಕು. ಮಕ್ಕಳಿಗೆ ಸಂಸ್ಕಾರ ಕೊಡುವ ಅಗತ್ಯತೆ ಇದೆ ಎಂದು ಹಿತ ನುಡಿದರು.

**ತಾಯಿ-ಮಗಳ ಸಂಬಂಧ:** ಆದಿಚುಂಚನ ಗಿರಿ ಮಹಾಸಂಸ್ಥಾನ ಮಠದ ಲಿಂ. ಬಾಲಗಂಗಾಧರ ಶ್ರೀಗಳ ಹಾಗೂ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಸಂಬಂಧ ತಾಯಿ-ಮಗಳ ಸಂಬಂಧ ಎಂದು ಧಾರ್ಮಿಕ ಸಮ್ಮೇಳನದ ಸಂದರ್ಭದಲ್ಲಿ ಮಾತನಾಡಿದ ತುಣಕನ್ನು ಶಂಭುನಾಥ ಶ್ರೀ ನೆನಪಿಸಿಕೊಂಡರು.

ಆದಿಚುಂಚನಗಿರಿ ಮಠಕ್ಕೂ (2ನೇ ಪುಟಕ್ಕೆ)

## ಎಡಗೈ-ಬಲಗೈ ಪಂಗಡಗಳಿಗೆ ಶೇ.50 ಮೀಸಲಾತಿಗೆ ನಿರ್ಧಾರ

**ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಸದಾಶಿವ ಆಯೋಗ ವರದಿ ಬದಿಗಿರಿಸಿ ಪರಿಶಿಷ್ಟ ಸಮುದಾಯದಡಿ ಬರುವ ಪಂಗಡಗಳ ಜನಪ್ರತಿನಿಧಿಗಳು ಹಾಗೂ ಮುಖಂಡರ ಸಭೆಯಲ್ಲಿ ಈ ಸರ್ವಸಮ್ಮತ ತೀರ್ಮಾನ ಕೈಗೊಳ್ಳಲಾಗಿದೆ.**

ಬೆಂಗಳೂರು, ಅ. 30 - ಪರಿಶಿಷ್ಟ ಸಮುದಾಯಗಳಿಗೆ ಇರುವ ಮೀಸಲಾತಿಯಲ್ಲಿ ಎಡಗೈ ಮತ್ತು ಬಲಗೈ ಪಂಗಡಗಳಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ಸಮಾನವಾಗಿ ಹಂಚಿಕೆ ಮಾಡಿಕೊಳ್ಳುವ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಪರಿಶಿಷ್ಟರಿಗೆ ಒಳಮೀಸಲಾತಿ ಕಲ್ಪಿಸುವ ಸಂಬಂಧ ಪೂರ್ಣಾಧಿಕಾರವನ್ನು ಆಯಾ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನ್ವಯ ಕರ್ನಾಟಕ ಸರ್ಕಾರ ಸಮಾನವಾಗಿ ಹಂಚಿಕೆ ಮಾಡಲು ಮುಂದಾಗಿದೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಈ ಸಮುದಾಯದ ಮುಖಂಡರ ಸಭೆಯಲ್ಲಿ, ಸಚಿವರು ಮಂಡಿಸಿದ ಸೂತ್ರಕ್ಕೆ ಒಕ್ಕೊರಲಿನ ಸಮ್ಮತಿ ವ್ಯಕ್ತವಾಗಿದೆ.

ಕಳೆದ 2011ರ ಜನಗಣತಿ ಆಧಾರದ ಮೇಲೆ ಒಳಮೀಸಲಾತಿ ಹಂಚಿಕೆ ಮಾಡಿದರೆ ಎಲ್ಲರಿಗೂ ನ್ಯಾಯ ದೊರೆಯುವುದಿಲ್ಲ, ಹಾಗಾಗಿ 2025-26ರಲ್ಲಿ ನಡೆಯಲಿರುವ ಜನಗಣತಿ ಅಂಶಗಳ ಆಧಾರದ ಮೇಲೆ ಮೀಸಲಾತಿ ಹಂಚಿಕೆ ಮಾಡಿಕೊಳ್ಳೋಣ. ಹೊಸ ಜನಗಣತಿ ಅಂಕಿ-ಅಂಶ ಬರುವ ವರೆಗೂ ಎಡಗೈ-ಬಲಗೈ ಈಗಿನ ಮೀಸಲಾತಿಯನ್ನು ಸಮನಾಗಿ ಹಂಚಿಕೊಳ್ಳೋಣ. ವರದಿ ಬಂದ ನಂತರ ಜನಸಂಖ್ಯೆ ಪ್ರಮಾಣದ ಆಧಾರದ ಮೇಲೆ ಹಂಚಿಕೆ ಮಾಡಿಕೊಳ್ಳೋಣ ಎಂಬ ಡಾ.ಪರಮೇಶ್ವರ್ ಸೂತ್ರಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ.

ತದನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮುದಾಯದ ಮುಖಂಡರ ನಿರ್ಧಾರವನ್ನು ತಿಳಿಸಿ, ಸಂಪುಟ ಸಭೆ ಮುಂದಿಟ್ಟು ಸಂವಿಧಾನಾತ್ಮಕವಾಗಿ ಹಂಚಿಕೆ ಮಾಡುವಂತೆ ಮಾಡಿದ ಮನವಿಗೆ ಸಮ್ಮತಿಯೂ ದೊರೆತಿದೆ.

ಕಳೆದ ಸೋಮವಾರ ನಡೆದ ಮಂತ್ರಿಮಂಡಲ ಸಭೆಯಲ್ಲಿ ವಿಷಯ ಮಂಡನೆ ಮಾಡಿ ಸಂವಿಧಾನ ಬದ್ಧವಾಗಿ ಒಳಮೀಸಲಾತಿ ಹಂಚಿಕೆ ಮಾಡುವ ಉದ್ದೇಶದಿಂದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಒಬ್ಬರ ನೇತೃತ್ವದಲ್ಲಿ ಆಯೋಗ ರಚಿಸಲಾಗಿದೆ.

ಆಯೋಗ ಮೂರು (2ನೇ ಪುಟಕ್ಕೆ)

## ಬೆಲೆ ನಿಯಂತ್ರಣಕ್ಕಾಗಿ ದೆಹಲಿಗೆ 840 ಟನ್ ಈರುಳ್ಳಿ ರವಾನೆ

ನವದೆಹಲಿ, ಅ. 30 – ಈರುಳ್ಳಿ ಬೆಲೆ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿದ್ದು, ದೆಹಲಿಗೆ 840 ಟನ್ ಈರುಳ್ಳಿ ದಾಸ್ತಾನು ರವಾನಿಸಿದೆ. ಕಳೆದ ಅಕ್ಟೋಬರ್ 20ರಂದು 1,600 ಟನ್ ಈರುಳ್ಳಿಯನ್ನು ದೆಹಲಿಗೆ ರವಾನಿಸಲಾಗಿತ್ತು. ಬೆಲೆ ಸ್ಥಿರೀಕರಣ ಯೋಜನೆಯಡಿ ನಫೆಡ್ ಖರೀಸಿದ್ದ ಈರುಳ್ಳಿಯನ್ನು ಈಗ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ. ಆಜಾದ್‌ಪುರ ಮಾರುಕಟ್ಟೆಯಲ್ಲಿ ಈ ಈರುಳ್ಳಿಯನ್ನು ಕೆಜಿಗೆ 35 ರೂ.ಗಳಂತೆ ಮಾರಲಾಗುವುದು. ರಾಜಧಾನಿಯಲ್ಲಿ ಈರುಳ್ಳಿ ಬೆಲೆ ಕೆ.ಜಿ.ಗೆ 80 ರೂ.ಗಳವರೆಗೆ ತಲುಪಿದೆ.

## ಜಿಲ್ಲೆಯಲ್ಲಿ ಶೇಂಗಾ ಖರೀದಿ ಕೇಂದ್ರ ಸ್ಥಾಪನೆ




ದಾವಣಗೆರೆ, ಅ.30 - ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2024-25ನೇ ಸಾಲಿನಲ್ಲಿ ಎಫ್.ಎ.ಕ್ಯೂ ಗುಣ ಮಟ್ಟದ ಶೇಂಗಾ ಉತ್ಪನ್ನವನ್ನು ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರಿಂದ ಶೇಂಗಾ ಉತ್ಪನ್ನವನ್ನು ಪ್ರತಿ ಎಕರೆಗೆ ಮೂರು ಕ್ವಿಂಟಾಲ್ ಹಾಗೂ ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ಶೇಂಗಾವನ್ನು ಪ್ರತಿ ಕ್ವಿಂಟಾಲ್ ಗೆ ರೂ.6,783 ಗಳಂತೆ ಬೆಂಬಲ ಬೆಲೆಯಲ್ಲಿ ಖರೀದಿಸಲಾ ಗುವುದು. (2ನೇ ಪುಟಕ್ಕೆ)

## ಅಯೋಧ್ಯೆ ದೀಪೋತ್ಸವದಲ್ಲಿ ಎರಡು ಗಿನ್ನಿಸ್ ದಾಖಲೆ



ಅಯೋಧ್ಯೆ, ಅ. 30 - ಇಲ್ಲಿ ನಡೆಸಲಾದ ಎಂಟನೇ ದೀಪೋತ್ಸವದಲ್ಲಿ ಏಕಕಾಲದಲ್ಲಿ ಅತಿ ಹೆಚ್ಚು ಜನರು ಆರತಿ ಬೆಳಗಿದ ಹಾಗೂ ಅತಿ ಹೆಚ್ಚು ದೀಪಗಳನ್ನು ಬೆಳಗಿದ ಗಿನ್ನಿಸ್ ದಾಖಲೆ ಸ್ಥಾಪನೆಯಾಗಿದೆ.

ರಾಮ ದೇವರ ನಗರವಾದ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ 25 ಲಕ್ಷ ಮಣ್ಣಿನ ಹಣತೆಗಳನ್ನು ಬೆಳಗಲಾಗಿತ್ತು. ಇದೇ ವೇಳೆ 1,121 ವೇದಾಚಾರ್ಯರು ಏಕಕಾಲಕ್ಕೆ ಆರತಿ ಬೆಳಗಿದರು.

## ವೈ.ಬಿ. ಶಿವಾನಂದಪ್ಪ ಬಸ್ತಿಹಳ್ಳಿ ನಿಧನ



ದಾವಣಗೆರೆ ವಿದ್ಯಾನಗರ 5ನೇ ಬಸ್‌ಸ್ಟಾಪ್, 17ನೇ ಕ್ರಾಸ್ ವಾಸಿ ವರ್ತಕರು ಮತ್ತು ಶಿವ ಸಹಕಾರಿ ಬ್ಯಾಂಕ್ ನಿರ್ದೇಶಕರಾದ ಬಿ.ಎಸ್. ಪ್ರಕಾಶ್ ಇವರ ತಂದೆ, ನಿವೃತ್ತ ಶಿಕ್ಷಕರಾದ

**ವೈ.ಬಿ. ಶಿವಾನಂದಪ್ಪ ಬಸ್ತಿಹಳ್ಳಿ** ನಿವೃತ್ತ ಶಿಕ್ಷಕರು

ಇವರು, ದಿನಾಂಕ 30.10.2024ರ ಬುಧವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ನಗರದ ವಿದ್ಯಾನಗರದ 17ನೇ ಕ್ರಾಸ್‌ನ ನಿವಾಸದಲ್ಲಿ ಬೆಳಿಗ್ಗೆ 10 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯನ್ನು ದಿನಾಂಕ 31.10.2024ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮವಾದ ಚಿತ್ರದುರ್ಗ ತಾಲ್ಲೂಕು ಬಸ್ತಿಹಳ್ಳಿ ಗ್ರಾಮದ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**

**ಬಿ.ಎಸ್. ಶ್ರೀಧರ್ ಬಸ್ತಿಹಳ್ಳಿ,** ಶಿಕ್ಷಕರು, ಜಗಳೂರು
ಮೊ : 99804 22754

**ಬಿ.ಎಸ್. ಪ್ರಕಾಶ್ ಬಸ್ತಿಹಳ್ಳಿ,**
ವರ್ತಕರು, ಮತ್ತು ಶಿವ ಸಹಕಾರಿ ಬ್ಯಾಂಕ್‌ನ ನಿರ್ದೇಶಕರು
ಮೊ : 94481 15256

## ದರ್ಶನ್ ಶಸ್ತ್ರಚಿಕಿತ್ಸೆಗೆ ಜಾಮೀನು



ಬೆಂಗಳೂರು, ಅ. 30 - ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಸಿಲುಕಿ ಬಂಧಿತನಾಗಿದ್ದ ನಟ ದರ್ಶನ್‌ಗೆ ವೈದ್ಯಕೀಯ ಹಿನ್ನೆಲೆಯಲ್ಲಿ ಹೈಕೋರ್ಟ್ ಜಾಮೀನು ನೀಡಿದೆ. ಬೆನ್ನು ನೋವಿನ ಹಿನ್ನೆಲೆಯಲ್ಲಿ ಶಸ್ತ್ರಚಿಕಿತ್ಸೆಗಾಗಿ ಜಾಮೀನು ನೀಡಬೇಕು ಎಂದು ದರ್ಶನ್ ಮನವಿ ಮಾಡಿಕೊಂಡಿದ್ದರು.

47 ವರ್ಷದ ದರ್ಶನ್ ಅವರನ್ನು ಕಳೆದ ಜೂನ್ 11ರಂದು ಬಂಧಿಸಲಾಗಿತ್ತು. ಬೆಂಗಳೂರು ಜೈಲಿನಲ್ಲಿದ್ದ ಅವರನ್ನು ನಂತರ ಬಳ್ಳಾರಿ ಜೈಲಿಗೆ ವರ್ಗಾಯಿಸಲಾಗಿತ್ತು. ಈ ಪ್ರಕರಣದಲ್ಲಿ ದರ್ಶನ್ ಸ್ನೇಹಿತೆ ಪವಿತ್ರ ಗೌಡ ಹಾಗೂ ಇತರೆ 15 ಜನರು ಆರೋಪಿಗಳಾಗಿದ್ದಾರೆ.

ಪವಿತ್ರ ಗೌಡ ಬೆಂಗಳೂರು ಜೈಲಿನಲ್ಲಿದ್ದರೆ, ಉಳಿದ ಆರೋಪಿಗಳು ರಾಜ್ಯದ ಬೇರೆ ಬೇರೆ ಜೈಲುಗಳಲ್ಲಿ ಇದ್ದಾರೆ. ಇವರಲ್ಲಿ ಕೆಲವರು ಇತ್ತೀಚೆಗೆ (2ನೇ ಪುಟಕ್ಕೆ)

## ನಗರವನ್ನು ಸುಂದರವನ್ನಾಗಿಸಲು ವಿಶೇಷ ಅನುದಾನ ಬಿಡುಗಡೆಗೆ ಮುಖ್ಯಮಂತ್ರಿಗಳಿಗೆ ದೂಡಾ ನಿಯೋಗ ಮನವಿ



ದಾವಣಗೆರೆ, ಅ.30-ದಾವಣಗೆರೆ - ಹರಿಹರ ಅವಳಿ ನಗರಗಳನ್ನು ಸುಂದರ ಮತ್ತು ಸುವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರೂ. 1226 ಕೋಟಿ ಅಂದಾಜು ವೆಚ್ಚದ ಯೋಜನೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನಿಯೋಗವು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಅವರ ಗೃಹ ಕಚೇರಿಯಲ್ಲಿ ನಿನ್ನೆ ಭೇಟಿ ಮಾಡಿದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರ ನೇತೃತ್ವದ ದೂಡಾ ನಿಯೋಗವು ಲಿಖಿತ ಮನವಿ ಅರ್ಪಿಸಿತು.

ಇದೇ ಸಂದರ್ಭದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಸಾಹಿತಿ ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಪುಸ್ತಕವನ್ನು ಉಡುಗೊರೆಯಾಗಿ ನೀಡಿದರು.

ಬೇತೂರು ಗ್ರಾಮದಿಂದ ಬಾಡಾ ಕ್ರಾಸ್‌ವರೆಗೆ 36 ಮೀಟರ್ ವರ್ತುಲ ರಸ್ತೆ ಅಭಿವೃದ್ಧಿಗೆ 300 ಕೋಟಿ ರೂ., ದೊಡ್ಡ ಬೂದಿಹಾಳ್‌ನಿಂದ ಯರಗುಂಡೆ, ದೊಡ್ಡಪಾತಿ, ಕುಂದುವಾಡ ಗ್ರಾಮಗಳ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿವರೆಗೆ ವರ್ತುಲ ರಸ್ತೆಗೆ 200 ಕೋಟಿ ರೂ., ದಾವಣಗೆರೆ ಅಶೋಕ ಟಾಕೀಸ್‌ನಿಂದ ಈರುಳ್ಳಿ ಮಾರುಕಟ್ಟೆವರೆಗೆ ರೈಲ್ವೆ ಹಳಿಗಳಿಗೆ ಸಮಾನಂತರ ಸೇವಾ ರಸ್ತೆಯ ನಿರ್ಮಾಣಕ್ಕೆ 35 ಕೋಟಿ ರೂ., ಜಿಲ್ಲಾ ಕೇಂದ್ರದಲ್ಲಿ ಅತ್ಯಾಧುನಿಕ ವ್ಯವಸ್ಥೆಯ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು 25 (2ನೇ ಪುಟಕ್ಕೆ)







# ಸಾರ್ಥಕಪಡಿಸಿಕೊಳ್ಳದಿದ್ದರೆ ಬದುಕು ವ್ಯರ್ಥ

**(1ನೇ ಪುಟದಿಂದ)** ತರಳಬಾಳು ಬೃಹನ್ಮಠಕ್ಕೂ ಅವಿನಾಭಾವ ಸಂಬಂಧ ಇದೆ. ಅದರಂತೆ ಮಾಗನೂರು ಬಸಪ್ಪ ಅವರು ತರಳಬಾಳು ಹಿರಿಯ ಜಗದ್ಗುರುಗಳೊಡನೆ ಇರುವ ನಿಕಟ ಸಂಪರ್ಕವನ್ನೂ ಸಹ ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾಧು ಸದ್ಧರ್ಮ ವೀರಶೈವ ಸಮಾಜದ ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಮಾತನಾಡಿ, ಅತ್ಯಂತ ಕಡು ಬಡತನದಲ್ಲಿ ಜನಿಸಿದರೂ ಸಹ ಬದುಕಿನ ಸಾರ್ಥಕತೆಯನ್ನು ಹೇಗೆ ಮಾಡಿಕೊಂಡರು ಎನ್ನುವುದಕ್ಕೆ ಲಿಂ. ಮಾಗನೂರು ಬಸಪ್ಪ ಜೀವಂತ ಉದಾಹರಣೆ ಎಂದು ಹೇಳಿದರು.

ಇಂದಿನ ಯುವ ಪೀಳಿಗೆ ಎತ್ತ ಸಾಗುತ್ತಿದೆ ಎಂದು ಯೋಚಿಸಬೇಕಾದ ಅನಿವಾರ್ಯತೆ ಇದೆ. ದೊಡ್ಡ ದೊಡ್ಡ ಮನುಷ್ಯರ ಅನುಕರಣೆ ಮಾಡುತ್ತಿರುವುದು ಭವಿಷ್ಯದ ಅನಾಹುತಗಳಿಗೆ ದಾರಿ ಮಾಡಿಕೊಡುತ್ತದೆಯೋ ಎಂಬುದು ತಿಳಿಯದು. ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡದಿದ್ದರೆ ಎಲ್ಲವೂ ಕೊಚ್ಚಿ ಹೋಗಲಿದೆ ಎಂದರು.

ದಾವಣಗೆರೆಯ ಸಮಗ್ರ ಅಭಿವೃದ್ಧಿಯಲ್ಲಿ ಮಾಗನೂರು ಬಸಪ್ಪ ಅವರ ಪಾತ್ರ ಮಹತ್ತರವಾದುದು. ಅವರ ಕಾಯಕ ನಿಷ್ಠೆ, ದಾಸೋಹ ಮನೋಭಾವನೆ ಮತ್ತು ನಿಸ್ವಾರ್ಥ ಸೇವೆ ಅವರನ್ನು ಪ್ರಾತಃಸ್ಮರಣೀಯರನ್ನಾಗಿಸಲು ಕಾರಣವಾಗಿದೆ ಎಂದು ಹೇಳಿದರು.

ನುಡಿ ನಮನ ಸಲ್ಲಿಸಿದ ಕಸಾಪ ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಅವರು, ಮಾಗನೂರು ಬಸಪ್ಪ ಅವರು ಹುಟ್ಟಿನಿಂದ ದೊಡ್ಡವರಾದವರಲ್ಲ. ಬದಲಾಗಿ ವ್ಯಕ್ತಿತ್ವದಿಂದ ದೊಡ್ಡವರಾದವರು. ಜೀವನದಲ್ಲಿನ ನಡೆ-ನುಡಿ ಸಮನಾಗಿದ್ದುದರಿಂದ ಮಹಾ ಶರಣರಾಗಿ ಹೊರ ಹೊಮ್ಮಲು ಸಾಧ್ಯವಾಯಿತು ಎಂದರು.

ಕಾಲ, ಕಾಸು, ಕಾಯಕದ ಮಹತ್ವ ಅರಿತಿದ್ದರಿಂದ ಜೀವನದ ಕೊನೆಯ ಉಸಿರು ಇರುವವರೆಗೂ ಸಮಾಜದ ಚಿಂತನೆಯನ್ನು ಮಾಡುವ ಮೂಲಕ ಸಮಾಜಕ್ಕಾಗಿ ದುಡಿದವರು. ಅವರಲ್ಲಿದ್ದ ಗುರುಭಕ್ತಿ, ಸಮಾಜ ಸೇವೆ ಅನನ್ಯ ಸದೃಶವಾದುದು. ತಮ್ಮ ಸ್ವಾರ್ಥಕ್ಕಾಗಿ ಸಮಾಜವನ್ನು ಮತ್ತು ಗುರುಗಳನ್ನು ಎಂದೂ ದುರ್ಬಳಕೆ ಮಾಡಿಕೊಂಡವರಲ್ಲ ಎಂದು ಹೇಳಿದರು.

29 ವರ್ಷಗಳ ಸುದೀರ್ಘ ಅವಧಿಯವರೆಗೆ ಸಾಧು ಸದ್ಧರ್ಮ ವೀರಶೈವ ಸಮಾಜವನ್ನು ಅಧ್ಯಕ್ಷರಾಗಿ ಮುನ್ನಡೆಸಿದ ಮೇರು ವ್ಯಕ್ತಿತ್ವ ಮಾಗನೂರು ಬಸಪ್ಪ ಅವರದು. ವಾಣಿಜ್ಯ, ಸಹಕಾರಿ, ಶಿಕ್ಷಣ ಕ್ಷೇತ್ರದಲ್ಲಿ ಸೇವೆಗೈದು ಆದರ್ಶಪ್ರಾಯರಾಗಿದ್ದರು ಎಂದರು.

1946 ರಲ್ಲಿಯೇ 15 ಎಕರೆ, 23 ಗುಂಟೆ ಜಮೀನನ್ನು ನಗರದ ಅನುಭವ ಮಂಟಪ ಶಾಲೆಗೆ ದಾನವಾಗಿ ನೀಡುವ ಮೂಲಕ ಇತರರಿಗೆ ಸ್ಫೂರ್ತಿಯಾಗಿದ್ದಾರೆ. ಅವರು ಎಂದಿಗೂ ಯಾವ ಪದವಿಯನ್ನು ಬಯಸಿದವರಲ್ಲ. ಮನಸ್ಸು ಮಾಡಿದ್ದರೆ ಎಂದೋ ಶಾಸಕ, ಸಚಿವ, ಸಂಸದರಾಗಬಹುದಿತ್ತು. ಆದರೆ ಪದವಿ ಬೆನ್ನತ್ತಿ ಹೋದವರಲ್ಲ ಎಂದು ಬಸಪ್ಪನವರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಬಿಜೆಪಿ ಮಹಿಳಾ ಮುಖಂಡರಾದ ಗಾಯತ್ರಿ ಜಿ.ಎಂ. ಸಿದ್ದೇಶ್ವರ ಮಾತನಾಡಿ, ದಾನ-ಧರ್ಮ ಎಂದಾಕ್ಷಣ ನೆನಪಾಗುವುದು ಮಾಗನೂರು ಬಸಪ್ಪನವರು. ಸಿರಿಗೆರೆ ತರಳಬಾಳು ಮಠಕ್ಕೆ ಬಸಪ್ಪನವರ ಕೊಡುಗೆ ಅನನ್ಯವಾದುದು. ಅವರು ಆರಂಭಿಸಿರುವ ಶಿಕ್ಷಣ ಸಂಸ್ಥೆಗಳು ಕೂಡ ಉತ್ತಮ ಶಿಕ್ಷಣ ನೀಡುವ ಮೂಲಕ ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡುತ್ತಿವೆ. ಪ್ರತಿಯೊಬ್ಬರೂ ಸಹ ಬಸಪ್ಪ ಅವರ ಮಾರ್ಗದಲ್ಲಿ ಮುನ್ನಡೆಯಬೇಕೆಂದರು.

ಸನ್ಮಾನ ಸ್ವೀಕರಿಸಿದ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ನಾಡಿಗ ಜಯಸ್ವಾಮಿ, ಶರಣ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಚಿಕ್ಕೋಳ್ ಈಶ್ವರಪ್ಪ, ಟ್ಯಾಕ್ಸ್ ಪ್ರಾಕ್ಟೀಷನರ್ ಟಿ. ಕೊಟ್ರೇಶ್, ನಿವೃತ್ತ ವೈದ್ಯಾಧಿಕಾರಿ ಡಾ. ಪಿ. ನಾಗರಾಜ್, ನಿವೃತ್ತ ಯೋಧ ಡಾ. ನಾಗಲಿಂಗಪ್ಪ, ಶುಶ್ರೂಷಾಧಿಕಾರಿ ಫ್ಲಾರೆನ್ಸ್ ಕೆ. ಮೇಸ್ತ್ರಿ, ಹೆಡ್ ಕಾನ್ಸ್‌ಟೇಬಲ್ ಜೆ.ಎಂ. ಮಂಜುನಾಥ್ ಅವರುಗಳು ಮಾಗನೂರು ಬಸಪ್ಪ ಅವರ ದಾನ-ಧರ್ಮ, ಸಮಾಜ ಸೇವೆಯನ್ನು ಕೊಂಡಾಡಿದರು.

ರಜನಿ (ಪ್ರಗತಿ ಪರ ರೈತರಾದ ಸರೋಜಮ್ಮ ಪಾಟೀಲ್ ಅವರ ಸೊಸೆ), ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರ ಗೌಡ್ರು ಮತ್ತಿತರರು ಉಪಸ್ಥಿತರಿದ್ದರು.

ಮಾಗನೂರು ಬಸಪ್ಪ ಶಾಲಾ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಎಂ.ಆರ್. ಪ್ರಭುದೇವ್ ಸ್ವಾಗತಿಸಿದರು. ಹೆಚ್.ಎಂ. ಅನ್ನಪೂರ್ಣ, ಟಿ.ಜಿ. ಲೀಲಾವತಿ ನಿರೂಪಿಸಿದರು. ಯುಕ್ತಾ ಎಂ. ಮಾಗನೂರು ಶರಣು ಸಮರ್ಪಿಸಿದರು.

ಎ.ಎಸ್. ಕುಸುಮಾ ಲಿಂ. ಮಾಗನೂರು ಬಸಪ್ಪ ಅವರ ಹೆಸರಿನ ದಾನ, ದತ್ತಿ ಬಗ್ಗೆ ವರದಿ ವಾಚಿಸಿದರು. ಅನ್ನಪೂರ್ಣ ವಿ. ಕೊಂಡಜ್ಜಿ ಭರತ ನಾಟ್ಯ ಪ್ರದರ್ಶಿಸಿದರು. ಮಾಗನೂರು ಬಸಪ್ಪ ಸಂಯುಕ್ತ ಶಾಲಾ ಮಕ್ಕಳು ನೃತ್ಯ ರೂಪಕ ಪ್ರದರ್ಶಿಸಿದರು.

# ರಸ್ತೆ ಅಕ್ಕ - ಪಕ್ಕದ ತಿಪ್ಪೇಗುಂಡಿಗಳನ್ನು ತೆರವುಗೊಳಿಸಿ

## ಹರಪನಹಳ್ಳಿ ತಾ.ಪಂ. ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕರಾದ ಎಂ.ಪಿ. ಲತಾ ನಿರ್ದೇಶನ



ಹರಪನಹಳ್ಳಿ, ಅ.30- ಹಳ್ಳಿಗಳಲ್ಲಿ ಸಾರ್ವಜನಿಕ ರಸ್ತೆಯ ಅಕ್ಕ-ಪಕ್ಕದಲ್ಲಿ ಹಾಕಿಕೊಂಡಿರುವ ತಿಪ್ಪೆಗುಂಡಿಗಳನ್ನು ಕೂಡಲೇ ತೆರವುಗೊಳಿಸಿ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಗ್ರಾ.ಪಂ ಪಿಡಿಒಗಳಿಗೆ ತಾಕೀತು ಮಾಡಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ಬುಧವಾರ ನಡೆದ 2ನೇ ತ್ರೈಮಾಸಿ ಪ್ರಗತಿ ಪರಿಶೀಲಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಜನರು ರಸ್ತೆ ಬದಿಯಲ್ಲಿ ಬೇಕಾಬಿಟ್ಟಿಯಾಗಿ ತಿಪ್ಪೆಗುಂಡಿಗಳನ್ನು ಹಾಕಿಕೊಂಡಿದ್ದು ಇದರಿಂದ ಸಾಂಕ್ರಾಮಿಕ ರೋಗಗಳು ಉಂಟಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಹಾಗಾಗಿ ಪ್ರತಿಯೊಬ್ಬ ಪಿಡಿಒಗಳು ತಕ್ಷಣವೇ ಯಾವುದೇ ಮುಲಾಜಿಲ್ಲದೇ ತಮ್ಮ ಗ್ರಾ.ಪಂ ವ್ಯಾಪ್ತಿಯ ಸುತ್ತ-ಮುತ್ತ ರಸ್ತೆಯಲ್ಲಿ ಹಾಕಿಕೊಂಡಿರುವ ಎಲ್ಲಾ ತಿಪ್ಪೆಗುಂಡಿಗಳನ್ನು ತೆರವುಗೊಳಿಸಿ ಗ್ರಾಮದಲ್ಲಿ ಫಾಗಿಂಗ್, ಬ್ಲೀಚಿಂಗ್ ಪೌಡರ್ ಸಿಂಪರಣೆ ಮಾಡಿ ಜನರ ಆರೋಗ್ಯ ಕಾಪಾಡಿ ಎಂದು ಪಿಡಿಒಗಳಿಗೆ ಸೂಚಿಸಿದರು.

ನಂದ್ಯಾಲ ಗ್ರಾಮದಲ್ಲಿ ಸಿಸಿ ರಸ್ತೆಯೊಂದರಲ್ಲಿ ದನಕರುಗಳನ್ನು ಕಟ್ಟುತ್ತಿರುವ ಪರಿಣಾಮ ಅಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ದೂರು ಇದೆ. ಈ ಬಗ್ಗೆ ಕ್ರಮವಹಿಸಿ ಎಂದು ಗ್ರಾ.ಪಂ ಪಿಡಿಓ ಬೋಜಪ್ಪ ಅವರಿಗೆ ತಿಳಿಸಿದರು.

ಅಲ್ಲಲ್ಲಿ ವಾಂತಿ ಭೇದಿ ಪ್ರಕರಣಗಳು ಕೇಳಿ ಬರುತ್ತಿದ್ದು ಈ ಬಗ್ಗೆ ಆರೋಗ್ಯ ಇಲಾಖೆ ಜಾಗೃತಿ ವಹಿಸಿ ಎಂದು ಶಾಸಕರು ಟಿಎಚ್‌ಒ ಅವರಿಗೆ ಸೂಚಿಸಿದರು ಆಗ ಟಿಎಚ್‌ಒ ಪೃಥ್ವಿ ಮಾತನಾಡಿ ಈಗಾಗಲೇ ಎಲ್ಲಾ ಕಡೆ ನಮ್ಮ ಸಿಬ್ಬಂದಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಈಚೆಗೆ ಟಿ. ತುಂಬಿಗೇರಿಯಲ್ಲಿ ಕಲುಷಿತ ನೀರು ಸೇವಿಸಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದ್ದವು. ಆದರೆ ಮೃತರ ಶವ ಪರೀಕ್ಷೆ ವರದಿಯಲ್ಲಿ ಬೇರೆ ಕಾಯಿಲೆಗೆ ಮೃತಪಟ್ಟಿರುವುದು ಧೃಢಪಟ್ಟಿದೆ ಎಂದು ಸಭೆಯ ಗಗನಕ್ಕೆ ತಂದರು.

ತಾಲ್ಲೂಕಿನ ಅನೇಕ ಕಡೆ ಸರ್ಕಾರಿ ಶಾಲೆಯ ಶಿಕ್ಷಕರು ಸಮಯಕ್ಕೆ ಸರಿಯಾಗಿ ತರಗತಿಗಳಿಗೆ ಹಾಜರಾಗುವುದಿಲ್ಲ, ಸರಿಯಾಗಿ ಪಾಠ ಮಾಡುವುದಿಲ್ಲ ಊರಲ್ಲಿ ರಾಜಕೀಯ ಮಾಡುತ್ತಾ ಹರಟೆ ಹೊಡೆಯುತ್ತಾರೆ ಎಂಬ ದೂರುಗಳಿವೆ, ಯಾವವ ಶಿಕ್ಷಕರು ಏನೇನೂ ಮಾಡುತ್ತಿದ್ದಾರೆ ಎಂಬ ಮಾಹಿತಿ ನನ್ನ ಬಳಿ ಇದೆ ತಾವು ರಾಜಕೀಯ ಮಾಡುವುದಾದರೆ ತಮ್ಮ ಶಿಕ್ಷಕ ಹುದ್ದೆಗೆ ರಾಜೀನಾಮೆ ಕೊಟ್ಟು ರಾಜಕೀಯ ಮಾಡಿ ಎಂದು ಶಿಕ್ಷಕರಿಗೆ ಎಚ್ಚರಿಕೆ ನೀಡಿದರು.

ಅಂಗನವಾಡಿ ಮಕ್ಕಳಿಗೆ ಸರಿಯಾಗಿ ಮೊಟ್ಟೆ, ಗುಣಮಟ್ಟದ ರೇಷನ್ ನೀಡುತ್ತಿಲ್ಲ ಎಂಬ ದೂರುಗಳಿವೆ. ಈ ಬಗ್ಗೆ ಕ್ರಮವಹಿಸಿ ಎಂದು ಶಾಸಕರು ಸೂಚಿಸಿದರು.

ತಹಶಿಲ್ದಾರ ಬಿ.ವಿ.ಗಿರೀಶಬಾಬು, ತಾ.ಪಂ ಇಒ ಚಂದ್ರಶೇಖರ್ ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ವೈ.ಎಚ್. ಎಇಇ ಕುಬೇಂದ್ರನಾಯ್ಕ್, ಪ್ರಕಾಶ ಪಾಟೀಲ್, ಕಿರಣ್, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಲೇಪಾಕ್ಷಪ್ಪ, ಕೃಷಿ ಅಧಿಕಾರಿ ಉಮೇಶ, ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಗಂಗಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಗಂಗಪ್ಪ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ದೀಪಾವಳಿ ಅಮಾವಾಸ್ಯೆ

ದಾವಣಗೆರೆ, ಅ. 30- ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ದಾವಣಗೆರೆ ಬಳಿಯ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿಗಳಿಗೆ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 1ರ ಶುಕ್ರವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ವಿನಿಯೋಗವಿರುತ್ತದೆ.



ಕಣಕ್ಕುಪ್ಪಿ ಕರಿಬಸಪ್ಪನವರ ಮಗಳು ಲಂಡನ್ ವಾಸಿ ಶ್ರೀಮತಿ ಮಾನಸ, ಅಶಿಸ್‌ಕುಮಾರ್ ಇವರ ಪುತ್ರ ಚಿ. ಈಶಾನ್ ಗುಪ್ತ ಇವರು ಪ್ರಸಾದದ ದಾಸೋಹ ಸೇವಾಕರ್ತರಾಗಿದ್ದಾರೆ.

ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ, ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಪಿಂಚಣಿದಾರರ ತುಟ್ಟಿಭತ್ಯೆ ಹೆಚ್ಚಳ

ನವದೆಹಲಿ, ಅ. 30- ಕೇಂದ್ರ ಸರ್ಕಾರ ಪಿಂಚಣಿದಾರರಿಗೆ ಹೆಚ್ಚುವರಿ ತುಟ್ಟಿಭತ್ಯೆ ಪರಿಹಾರವನ್ನು ಬಿಡುಗಡೆ ಮಾಡಿದೆ. ಹೆಚ್ಚುವರಿಯಾಗಿ ಶೇ.3ರಷ್ಟು ತುಟ್ಟಿಭತ್ಯೆ ನೀಡಲು ಕೇಂದ್ರ ಸರ್ಕಾರ ಸಮ್ಮತಿಸಿದೆ. ಇದು ಜುಲೈ 1, 2024ರಿಂದ ಪೂರ್ವಾನ್ವಯ ವಾಗಲಿದೆ. ಪ್ರಸಕ್ತ ಪಿಂಚಣಿದಾರರಿಗೆ ಶೇ.50ರಷ್ಟು ತುಟ್ಟಿಭತ್ಯೆ ನೀಡಲಾಗುತ್ತಿತ್ತು. ಇದನ್ನು ಶೇ.53ಕ್ಕೆ ಹೆಚ್ಚಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ಮಹಾರಾಷ್ಟ್ರ : ಅತಿ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಸ್ಪರ್ಧೆ

ನವದೆಹಲಿ, ಅ. 30 - ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಯಲ್ಲಿ ಬಿಜೆಪಿ 148 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಅರ್ಧ ಡಜನ್ ಪ್ರಮುಖ ಪಕ್ಷಗಳಲ್ಲಿ ಬಿಜೆಪಿ ಅತಿ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು 103 ಕ್ಷೇತ್ರಗಳಲ್ಲಿ ಕಣದಲ್ಲಿದ್ದಾರೆ. ಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಯು 80 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಎನ್.ಸಿ.ಪಿ. 53 ಕ್ಷೇತ್ರಗಳಲ್ಲಿ ಕಣದಲ್ಲಿದೆ. ಮಹಾರಾಷ್ಟ್ರದ 288 ಕ್ಷೇತ್ರಗಳಿಗೆ ನವೆಂಬರ್ 20ರಂದು ಚುನಾವಣೆ ನಡೆಯಲಿದೆ.

ಎಂ.ವಿ.ಎ. ಮೈತ್ರಿಕೂಟದಲ್ಲಿ ಕಾಂಗ್ರೆಸ್ 103 ಕ್ಷೇತ್ರಗಳಲ್ಲಿ ಸ್ಪರ್ಧಿ ಸಲಿದೆ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) 89 ಹಾಗೂ ಶರದ್ ಪವಾರ್ ನೇತೃತ್ವದ ಎನ್.ಸಿ.ಪಿ. (ಎಸ್.ಪಿ.) 87 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ.

ಅಕ್ಟೋಬರ್ 22ರಂದು ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿತ್ತು. ಮಂಗಳವಾರ ನಾಮಪತ್ರ ಸಲ್ಲಿಕೆಯ ಗಡುವು ಮುಗಿದಿದೆ.

## ದಾನಮ್ಮ ದೇವಸ್ಥಾನದಲ್ಲಿ ನಾಳೆ ದೀಪಾವಳಿ ಅಮಾವಾಸ್ಯೆ



ದಾವಣಗೆರೆ, ಅ. 30 - ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 1 ರ ಶುಕ್ರವಾರ ಬೆಳಿಗ್ಗೆ ಶ್ರೀ ಸ್ವಾಮಿಗೆ ವಿಶೇಷ ಪೂಜೆ ನಡೆಯಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ.

ಡಾ. ಎಂ.ಬಿ. ಕೌಜಲಗಿ ಮತ್ತು ಅರುಣ್ ಕೌಜಲಗಿ, ಮಕ್ಕಳು ಹಾಗೂ ಕುಟುಂಬದವರು ಮತ್ತು ಶ್ರೀ ಭರತ್ ಸ್ಟೀಲ್ಸ್ ನವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಸಾಲು ದೀಪ...

ಸಾಲು ಸಾಲಿನಲಿ ದೀಪವು ಬೆಳಗಿದೆ
ತಂಪಿನ ಬೆಳಕಲಿ ಸಂಭ್ರಮವನು ತಂದಿದೆ
ಕತ್ತಲು ಸರಿಸಿ-ಬೆಳಕನ್ನೆಲ್ಲೆಡೆ
ಹರಡುತ
ನವ ಚೈತನ್ಯವನದು ಬಾಳಿಗೆ
ಸುರಿದಿದೆ

ದೀಪಾವಳಿ ದೀಪವು
ಜಗಮಗಿಸುತಿದೆ
ಶುಭ್ರ ಬೆಳಕಿನ ಕಿರಣವನ್ನೆಲ್ಲಡೆ ಹರಡಿದೆ
ಕಾಂತಿಯ ಹರಡಿ ಮನವನು ಸೆಳೆಯುತ
ಬಾಳಿನ ಹಾದಿಗೆ ಹೊಸ ಬೆಳಕನು ಚೆಲ್ಲಿದೆ

ಮಣ್ಣಿನ ಹಣತೆಯು ಸೊಬಗನು ಸಾರಿದೆ...
ಹತ್ತಿಯ ಬತ್ತಿ ಎಣ್ಣೆಯು ಒಲವನು ತುಂಬಿದೆ
ಚುಮುಚುಮು ಚಳಿಯ ಕಾರ್ತೀಕ ಮಾಸದಲಿ
ಭೂರಮೆ ಒಡಲದು ಬೆಚ್ಚನೆ ಕಾವಿಗೆ ನಲಿದಿದೆ

ದೀಪದ ಸಾಲು ಮನೆಮನೆಯಲು ಬೆಳಗಿದೆ
ಸುಡುಮದ್ದು ಪಟಾಕಿಯು ಜೊತೆಯಲಿ ಬಂದಿದೆ
ಪಟಪಟ ಸದ್ದದು ಬೆಳಕನು ಬಾನಿಗೆ ಚಿಮ್ಮಿಸುತ
ಫಳಫಳ ನಕ್ಷತ್ರದ ಬೆಳಕಲಿ ಕಣ್ಮನವನು
ತುಂಬಿದೆ.

**- ವೀಣಾ ಕೃಷ್ಣಮೂರ್ತಿ**, ದಾವಣಗೆರೆ.

## ದೀಪಾವಳಿ ಸಡಗರ



ಮೂಡಣದಿ ಅರುಣೋದಯ
ಮೂಡಿ ಇಳೆಯೆಲ್ಲಾ ಜ್ಯೋತಿಯ
ಮೂಢ ಜನರಿಗೆ ಶಾಂತಿ ಕಾಂತಿಯ
ಮೂಡಲಮನೆಯಲ್ಲಿ ಜ್ಞಾನದ ಜಯ

ಅಜ್ಞಾನವ ಓಡಿಸಿದ ದೀಪಾವಳಿ
ಅಂಧಕಾರ ತೊಲಗಿಸಿ ಬೆಳಕಾವಳಿ
ಅರಿವೆಂಬ ದೀವಿಗೆ ಮೂಡಿ ಎಲ್ಲೆಲ್ಲೂ
ಅರಮನೆಯಾಯ್ತು ಇಳೆ ಲೀಲಾವಳಿ

ಜಲರೂಪಿ ಗೋವಿಂದ ಲೀಲಾವಳಿ
ಜಗದೊದ್ಧಾರ ವಿಷ್ಣು ಅಸುರನ ವಧಿಸಿದ ದೀಪಾವಳಿ
ಜಗದೊಡೆಯ ರಾಮನ ಆಗಮನ
ಜಗದೇಕ ವೀರ ವಿಷ್ಣು ಬಲಿಯ ತುಳಿದನ

ಸಾಲು ಸಾಲು ದೀಪಾಲಂಕರಿಸಿ
ಸಡಗರದಿ ಲಕ್ಷ್ಮಿಯ ಪೂಜಿಸಿ
ಸುರಾ ಸುರಾ ಪಟಾಕಿ ಸಿಡಿಸಿ
ಸಹಕಾರದಿ ನಭದಲಿ ಚುಕ್ಕಿ ಚಿತ್ತಾರ ಬಿಡಿಸಿ

ದುಷ್ಟರ ಸಂಹಾರ ಆಯ್ತು
ದುಪ್ಪಟ್ಟಾಯ್ತು ಸಿಹಿಯ ಸಡಗರ
ಶಿಷ್ಟರ ವಿಜಯದ ಹಾರ
ದುರಹಂಕಾರ ಓಡಿಸುವ ಶ್ರೀಕಾರ

**- ಕೋಮಲ ವಿ. ಕುಮಾರ್**, ದಾವಣಗೆರೆ.

## ದರ್ಶನ್‌ಗೆ ಜಾಮೀನು

**(1ನೇ ಪುಟದಿಂದ)** ಜಾಮೀನು ಪಡೆದುಕೊಂಡಿದ್ದಾರೆ. ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರ ಪೀಠ, ಶಸ್ತ್ರಚಿಕಿತ್ಸೆಗಾಗಿ ಆರು ವಾರಗಳ ಜಾಮೀನು ನೀಡಿದೆ. ದರ್ಶನ್ ತಮ್ಮ ಪಾಸ್‌ಪೋರ್ಟ್ ಅನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಬೇಕು ಹಾಗೂ ಸಾಕ್ಷಿಗಳನ್ನು ತಿರುಚುವ ಯತ್ನ ಮಾಡಬಾರದು ಎಂದು ಷರತ್ತು ವಿಧಿಸಲಾಗಿದೆ.

ದರ್ಶನ್ ಬಯಸಿದ ಆಸ್ಪತ್ರೆಯಲ್ಲಿ ಶಸ್ತಚಿಕಿತ್ಸೆ ಪಡೆಯ ಬಹುದು ಹಾಗೂ ಆರೋಗ್ಯ ಪರಿಸ್ಥಿತಿಯ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಹೈಕೋರ್ಟ್ ಹೇಳಿದೆ.

ಬಳ್ಳಾರಿ ಕೇಂದ್ರ ಬಂಧೀಖಾನೆಯ ವೈದ್ಯರು ಹಾಗೂ ಬಳ್ಳಾರಿ ಸರ್ಕಾರಿ ಆಸ್ಪತ್ರೆಯ ನ್ಯೂರಾಲಜಿ ವಿಭಾಗದ ಮುಖ್ಯಸ್ಥರು ನೀಡಿದ ವರದಿಯನ್ನು ರಾಜ್ಯ ಸರ್ಕಾರ ಮೊಹರು ಮಾಡಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ದರ್ಶನ್ ಪರ ವಕೀಲ ಸಿ.ವಿ. ನಾಗೇಶ್ ಹಾಗೂ ಪಬ್ಲಿಕ್ ಪ್ರೊಸಿಕ್ಯೂಟರ್ ಪಿ. ಪ್ರಸನ್ನ ಕುಮಾರ್ ಅವರ ವಾದಗಳನ್ನು ಆಲಿಸಿದ ನಂತರ ಹೈಕೋರ್ಟ್ ಮಂಗಳವಾರ ತನ್ನ ಆದೇಶ ಕಾಯ್ದಿರಿಸಿತ್ತು. ಜಾಮೀನಿಗಾಗಿ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಸೆಷನ್ ನ್ಯಾಯಾಲಯ ಸೆಪ್ಟೆಂಬರ್ 21ರಂದು ತಳ್ಳಿ ಹಾಕಿತ್ತು. ನಂತರ ದರ್ಶನ್ ಜಾಮೀನಿಗಾಗಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿ ಸಿದ್ದರು ಹಾಗೂ ಶಸ್ತ್ರಚಿಕಿತ್ಸೆಗಾಗಿ ಮಧ್ಯಂತರ ಜಾಮೀನು ನೀಡಬೇಕು ಎಂದು ಕೋರಿದ್ದರು.

## 398 ಉದ್ಯಮಗಳ ಮೇಲೆ ಅಮೆರಿಕ ನಿರ್ಬಂಧ

ವಾಷಿಂಗ್ಟನ್, ಅ. 30 – ಭಾರತ ಸೇರಿದಂತೆ ಹಲವು ದೇಶಗಳ 398 ಉದ್ಯಮಗಳು ರಷ್ಯಾ ಸಮರಕ್ಕೆ ನೆರವಾಗುತ್ತಿವೆ ಎಂದು ಹೇಳಿರುವ ಅಮೆರಿಕ, ಈ ಉದ್ಯಮಗಳ ಮೇಲೆ ನಿರ್ಬಂಧ ಹೇರಿದೆ. ಈ ಉದ್ಯಮಗಳು ರಷ್ಯಾಗೆ ಸರಕುಗಳನ್ನು ಪೂರೈಸುತ್ತಿವೆ. ರಷ್ಯಾ ಮೇಲೆ ಹೇರಲಾಗಿರುವ ದಿಗ್ಬಂಧನದಿಂದ ನುಣುಚಿ ಕೊಳ್ಳಲು ಉದ್ಯಮಗಳು ನೆರವು ನೀಡುತ್ತಿವೆ ಎಂದು ಅಮೆರಿಕ ತಿಳಿಸಿದೆ. ಈ ಪೈಕಿ 274 ಕಂಪನಿಗಳು ರಷ್ಯಾಗೆ ಆಧುನಿಕ ತಂತ್ರ ಜ್ಞಾನ ಒದಗಿಸುತ್ತಿವೆ. ಸೈನಿಕ ಉತ್ಪನ್ನಗಳು ಹಾಗೂ ಹಣಕಾಸು ವಿಷಯದಲ್ಲಿ ನೆರವಾಗುತ್ತಿವೆ ಎಂದು ಅಮೆರಿಕ ಆರೋಪಿಸಿದೆ.

# ನೀರಿನಲ್ಲಿ ಮುಳುಗಿ ಸಾವು: 5 ಲಕ್ಷ ರೂ. ಪರಿಹಾರ ವಿತರಣೆ



ಜಗಳೂರು, ಅ.30- ತಾಲ್ಲೂಕಿನ ಹಿರೇಮಲ್ಲನಹೊಳೆ ಕೆರೆ ಅಂಗಳದಲ್ಲಿ ಸಾವನ್ನಪ್ಪಿದ ಮಗುವಿನ ಪೋಷಕರಿಗೆ ಜಿಲ್ಲಾಡಳಿತದಿಂದ 5ಲಕ್ಷ ರೂ., ವೈಯಕ್ತಿಕವಾಗಿ 25,000 ಹಾಗೂ ಗ್ರಾ.ಪಂ ವತಿಯಿಂದ 25,000 ರೂ. ಪರಿಹಾರ ಒದಗಿಸಲಾಗಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಲಜಾಗೃತಿ ಮೂಡಿಸಲು ಕರೆದಿದ್ದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಾದ್ಯಂತ ಕೆರೆಗಳು ಕೋಡಿ ಬಿದ್ದಿವೆ ಕೆರೆ, ಕಟ್ಟೆಗಳು ಭರ್ತಿಯಾದ ಹಿನ್ನೆಲೆ ಎಚ್ಚರಿಕೆ ನಾಮಫಲಕ ಅಳವಡಿಸಿ,ಟಾಂ ಟಾಂ ಹೊಡೆಸುವ ಮೂಲಕ ಸಾವಿನ ಘಟನೆಗಳು ಮರುಕಳಿಸದಂತೆ ಸಾರ್ವಜನಿಕರು ಸುರಕ್ಷಿತವಾಗಿರಲು ಅಧಿಕಾರಿಗಳು ಜಾಗೃತಿ ಮೂಡಿಸಬೇಕು ಎಂದು ಸೂಚಿಸಿದರು.

ಕಳೆದ 5ದಶಕಗಳ ನಂತರ 57 ಕೆರೆ ಯೋಜನೆ ಹಾಗೂ ವರುಣನ ನರ್ತನದಿಂದ 35ಕ್ಕೂ ಅಧಿಕ ಕೆರೆಗಳು ಕೋಡಿಬಿದ್ದಿರುವುದು ಒಂದೆಡೆ ಸಂತಸವಾದರೆ, ಮತ್ತೊಂದೆಡೆ ಹಿರೇಮಲ್ಲನಹೊಳೆ ಗ್ರಾಮದಲ್ಲಿ ಕೆರೆ ಅಂಗಳದಲ್ಲಿ ಮಂಗಳವಾರ ಎರಡುವರ್ಷದ ಮಗುವಿನ ಸಾವನ್ನಪ್ಪಿದ ಘಟನೆ, ಅಸಗೋಡು ವಡ್ಡರಹಟ್ಟಿಯ ಕೃಷಿಹೊಂಡದಲ್ಲಿ ಬಿದ್ದು ಎರಡು ಮಕ್ಕಳ ಸಾವಿನ ಘಟನೆ, ಸಂಗೇನಹಳ್ಳಿ ಕೆರೆ ಬಳಿ ಓರ್ವ ವ್ಯಕ್ತಿ ಸೇರಿದಂತೆ ನಾಲ್ಕು ಜನರ ಸರಣಿ ಮರಣ ನೋವು ತಂದಿವೆ ಎಂದರು.

ತಾಲ್ಲೂಕಿನಾದ್ಯಂತ ಕೆರೆ, ಕಟ್ಟೆ ಕೃಷಿ ಹೊಂಡಗಳು ನೀರಿನಿಂದ ತುಂಬಿವೆ. ಪೋಷಕರು ಮಕ್ಕಳನ್ನು ನೀರಿನ ಸಂಗ್ರಹಣೆ ಪ್ರದೇಶಗಳಿಂದ ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕು ಎಂದು ಶಾಸಕರು ಸಲಹೆ ನೀಡಿದರು.

ಗ್ರಾಮದಲ್ಲಿ ನಿರಾಶ್ರಿತರಿಗೆ ಸರ್ಕಾರದಿಂದ ಸೌಲಭ್ಯ ಕಲ್ಪಿಸಲಾಗುವುದು. ನೀರಿನಲ್ಲಿ ಮುಳುಗಿದ ಮನೆಗಳನ್ನು ತೊರೆದು ಕಾಳಜಿ ಕೇಂದ್ರದಲ್ಲಿ ವಾಸವಿರಬೇಕು ಎಂದರು.

ಜಿಲ್ಲಾಧಿಕಾರಿ ಡಾ. ಗಂಗಾಧರಸ್ವಾಮಿ ಮಾತನಾಡಿ, ಕೆರೆ ಅಂಗಳದಲ್ಲಿಒತ್ತುವರಿಯಾಗಿಮನೆನಿರ್ಮಾಣಮಾಡಿಕೊಂಡವರಿಗೆ ಎನ್ ಡಿ ಆರ್ ಎಫ್ ನಡಿ ಪರಿಹಾರ ಸಿಗುವುದಿಲ್ಲ. ಎಸ್ .ಡಿ.ಆರ್ ಎಫ್ ನಡಿ ತಲಾ ಲಕ್ಷರೂ. ಪರಿಹಾರ, ಶಾಶ್ವತ ಸೂರು ಕಲ್ಪಿಸಲಾಗುವುದು.

ಹಿಂಗಾರು ಬೆಳೆ ಪರಿಹಾರಕ್ಕೆ ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆಗಳ ಸಹಯೋಗದಲ್ಲಿ ಜಂಟಿ ಸರ್ವೆ ಕಾರ್ಯ ಪ್ರಕ್ರಿಯೆಯಲ್ಲಿದ್ದು, ಶೀಘ್ರದಲ್ಲಿ ಪ್ರತಿ ಎಕರೆಗೆ ಖುಷ್ಕಿ ಬೆಳೆ 8500, ತೋಟಗಾರಿಕೆ ಬೆಳೆ 22,000, ಕೃಷಿ ತರಕಾರಿ ಬೆಳೆ 17,000 ರೂ. ಎರಡು ಎಕರೆಗಳಿಗೆ ಸೀಮಿತಗೊಳಿಸಿ ಪರಿಹಾರ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಜಿ.ಪಂ ಸಿಇಓ ಸುರೇಶ್ ಹಿಟ್ನಾಳ್ ಮಾತನಾಡಿ,'ಕೆರೆಗಳ ಕೋಡಿಗಳ ಸುತ್ತಮುತ್ತ ಜಂಗಲ್ ಕಟ್ಟಿಂಗ್, ಕೋಡಿಗಳ ದುರಸ್ಥಿಗೊಳಿಸಲಾಗುವುದು. ಜಲಾವೃತಗೊಂಡು ಶಿಥಿಲಾವಸ್ಥೆಯಲ್ಲಿನ ಶಾಲೆಗಳ ದುರಸ್ಥಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಲೋಕೇಶ್, ಉಪವಿಭಾಗ ಅಧಿಕಾರಿ ಸಂತೋಷ್ ಕುಮಾರ್, ತಹಶೀಲ್ದಾರ್ ಸಯ್ಯದ್ ಕಲೀಂ ಉಲ್ಲಾ, ತಾ.ಪಂ ಇಓ ಕೆಂಚಪ್ಪ, ಬಿಇಓ ಹಾಲಮೂರ್ತಿ, ಪಿಡಬ್ಲೂಡಿ ಎಇಇ ನಾಗರಾಜ್, ಜಿ.ಪಂ.ಎಇಇ ಶಿವಮೂರ್ತಿ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಎಡಗೈ-ಬಲಗೈ ಪಂಗಡಗಳಿಗೆ ಮೀಸಲಾತಿಗೆ ನಿರ್ಧಾರ

**(1ನೇ ಪುಟದಿಂದ)** ತಿಂಗಳಲ್ಲಿ ವರದಿ ನೀಡುವಂತೆ ಸಮಯ ನಿಗದಿ ಮಾಡಲಾಗಿದ್ದು, ಸರ್ಕಾರ ಆಯೋಗಕ್ಕೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲಿದೆ.

2011ರ ನಂತರ ದೇಶದಲ್ಲಿ ಜನಗಣತಿ ನಡೆದಿಲ್ಲ, ಮುಂದಿನ ವರ್ಷ ದೇಶದಲ್ಲಿ ಜನಗಣತಿ ನಡೆಸಲು ಕೇಂದ್ರ ಸರ್ಕಾರ ಸಜ್ಜಾಗಿದೆ, ಈ ವರದಿ ಬರುವವರೆಗೆ ಕಾಯುವುದು ಒಳ್ಳೆಯದು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

# ಜಿಲ್ಲೆಯಲ್ಲಿ ಶೇಂಗಾ ಖರೀದಿ ಕೇಂದ್ರ ಸ್ಥಾಪನೆ

**(1ನೇ ಪುಟದಿಂದ)** ಕೇಂದ್ರ ಸರ್ಕಾರದ ಬೆಂಬಲ ಬೆಲೆ ಅನುಸಾರ ನ್ಯಾಫೆಡ್ ಸಂಸ್ಥೆಯನ್ನು ಖರೀದಿ ಏಜೆನ್ಸಿಯಾಗಿ ಹಾಗೂ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು ಇವರನ್ನು ರಾಜ್ಯ ಮಟ್ಟದ ಖರೀದಿ ಏಜೆನ್ಸಿಯನ್ನಾಗಿ ನೇಮಿಸಲಾಗಿದೆ.

ರೈತರ ನೋಂದಣಿ ಕಾಲಾವಧಿಯನ್ನು 45 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗಧಿಪಡಿಸಲಾಗಿದೆ. ರೈತರು ಫ್ರೂಟ್ಸ್ ಐ.ಡಿಯೊಂದಿಗೆ ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, ದಾವಣಗೆರೆ, ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, ಜಗಳೂರು ಈ ಸ್ಥಳಗಳಲ್ಲಿನ ಖರೀದಿ ಕೇಂದ್ರಗಳಲ್ಲಿ ನೊಂದಣಿ ಮಾಡಿಕೊಂಡು ಶೇಂಗಾ ಮಾರಾಟ ಮಾಡಬಹುದು.

ಜಿಲ್ಲೆಯಲ್ಲಿ ಖರೀದಿಸಿದ ಶೇಂಗಾ ಹುಟ್ಟುವಳಿಯನ್ನು ದಾಸ್ತಾನು ಮಾಡಲು ಜಿಲ್ಲೆಯಲ್ಲಿರುವ ರಾಜ್ಯ ಹಾಗೂ ಕೇಂದ್ರ ಉಗ್ರಾಣಗಳಲ್ಲಿ ಸ್ಥಳ ಕಾಯ್ದಿರಿಸಲು ಸೂಚಿಸಲಾಯಿತು.

ಶೇಂಗಾ ಮಾರಾಟ ಮಾಡಿದ ರೈತರಿಗೆ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಮಾರಾಟ ಮಾಡಿದ ರೈತರ ಹೆಸರಿನ ಅಧಾರ್ ಸಂಖ್ಯೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಜಮಾ ಆಗುವಂತೆ ಪಾವತಿ ಮಾಡಲು ಪ್ರತಿನಿತ್ಯ ಖರೀದಿಸುವ ಪ್ರಗತಿಯ ವಿವರವನ್ನು ಸರ್ಕಾರಕ್ಕೆ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಇ-ಮೇಲ್ ಮೂಲಕ ಸಲ್ಲಿಸಲು ಸೂಚಿಸಲಾಯಿತು. ಗುಣಮಟ್ಟ ಪರಿಶೀಲನೆಗಾಗಿ ಗ್ರೇಡರ್ ಗಳನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ನೇಮಕ ಮಾಡಲು ಹಾಗೂ ಸಿಬ್ಬಂದಿಗಳಿಗೆ ಎಫ್.ಎ.ಕ್ಯೂ ಗ್ರೇಡಿಂಗ್ ತರಬೇತಿ ನೀಡಲು ಸೂಚಿಸಲಾಯಿತು.

# ವಿಶೇಷ ಅನುದಾನ ಬಿಡುಗಡೆಗೆ ಮುಖ್ಯಮಂತ್ರಿಗಳಿಗೆ ದೂಡಾ ಮನವಿ

**(1ನೇ ಪುಟದಿಂದ)** ಕೋಟಿ ರೂ. ಬಿಡುಗಡೆಗೆ ಆಗ್ರಹಿಸಲಾಯಿತು.

ರೈಲ್ವೆ ಸ್ಟೇಷನ್, ಖಾಸಗಿ ಬಸ್ ನಿಲ್ದಾಣ, ಅಶೋಕ ಟಾಕೀಸ್ ಮುಂಭಾಗ ಸ್ಕೈ ವಾಕ್ ನಿರ್ಮಿಸಲು 3 ಕೋಟಿ ರೂ., ದಾವಣಗೆರೆ, ಹರಿಹರದಲ್ಲಿ ಸರ್ಕಾರಿ ನೌಕರರಿಗೆ ವಸತಿ ಗೃಹಗಳ ನಿರ್ಮಾಣಕ್ಕೆ 50 ಕೋಟಿ ರೂ., ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತ ಸಭಾಂಗಣಕ್ಕೆ 15 ಕೋಟಿ ರೂ., ಹರಿಹರದ ಕೇಶವನಗರ, ದಾವಣಗೆರೆ ತಾಲ್ಲೂಕಿನ ವಡ್ಡಿನಹಳ್ಳಿಯಲ್ಲಿ ಮಹಾ ಯೋಜನೆಯಲ್ಲಿ ಕಾಯ್ದಿರಿಸಿದ ಟ್ರಕ್ ಟರ್ಮಿನಲ್ ಅಭಿವೃದ್ಧಿಗೆ 25 ಕೋಟಿ ರೂ., ಸುಸಜ್ಜಿತ ಒಂದು ಮ್ಯೂಸಿಯಂ ನಿರ್ಮಿಸಲು 10 ಕೋಟಿ ರೂ., ನಗರ ವಾಹನ ದಟ್ಟಣೆ ಮುಕ್ತವಾಗಿಸಲು ಪಿ.ಬಿ. ರಸ್ತೆಯಿಂದ ಹದಡಿ ರಸ್ತೆಯ ಮೂಲಕ ರಾಷ್ಟ್ರೀಯ ಹೆದ್ದಾರಿವರೆಗೆ ಮೇಲ್ಸೇತುವೆ ನಿರ್ಮಾಣಕ್ಕೆ 500 ಕೋಟಿ ರೂ. ನೀಡುವಂತೆ ಮನವಿ ಮಾಡಲಾಯಿತು.

ಟಿವಿ ಸ್ಟೇಷನ್ ಕೆರೆ ಪ್ರವಾಸಿಗರನ್ನು ಆಕರ್ಷಿಸಲು, ಅದರ ಸೌಂದರ್ಯೀಕರಣ, ವಾಟರ್ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಿಸಲು 5 ಕೋಟಿ ರೂ., ದಾವಣಗೆರೆ ನಗರದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ 20 ಕೋಟಿ ರೂ., ಬಾತಿ ಗುಡ್ಡದಿಂದ ಕುಂದುವಾಡ ಕೆರೆವರೆಗೆ ರೋಪ್‌ವೇ, ಬಾತಿ ಗುಡ್ಡದಲ್ಲಿ 150 ಅಡಿ ಎತ್ತರದ ದಾವಣಗೆರೆಗೆ ಅಭಿಮುಖವಾಗಿ ಆಂಜನೇಯ ಮೂರ್ತಿ/ಬಸವಣ್ಣನವರ ಮೂರ್ತಿ ನಿರ್ಮಾಣಕ್ಕೆ 2 ಕೋಟಿ ರೂ., ಜವಾಹರ್‌ಲಾಲ್ ನೆಹರು ತಾರಾಲಯ ಮಾದರಿಯಲಾಲಿ ದಾವಣಗೆರೆಯಲ್ಲಿ ತಾರಾಲಯ ನಿರ್ಮಾಣಕ್ಕೆ 10 ಕೋಟಿ ರೂ., ದಾವಣಗೆರೆ - ಹರಿಹರದಲ್ಲಿ 70: 30 ಅನುಪಾತದ ಜಂಟಿ ಉದ್ಯಮದಲ್ಲಿ 500 ಎಕರೆಯಲ್ಲಿ ವಸತಿ ಯೋಜನೆ ನಿರ್ಮಾಣಕ್ಕೆ ನೆರವು ನೀಡಬೇಕು ಎಂದು ಕೋರಲಾಯಿತು.

ದೂಡಾ ಸದಸ್ಯರುಗಳಾದ ಎಂ. ಮಂಜುನಾಥ ತಕ್ಕಡಿ, ಶ್ರೀಮತಿ ಎಂ.ಆರ್. ವಾಣಿ ಬಕ್ಕೇಶ್, ಜಬ್ಬಾರ್ ಖಾನ್, ಆಯುಕ್ತ ಹುಲ್ಮನಿ ತಿಮ್ಮಣ್ಣ ಮತ್ತು ಇತರರು ನಿಯೋಗದಲ್ಲಿದ್ದರು.

## ಶ್ರೀ ಪ್ರಭಾಕರ್ ಎಂ. ಗೌಡ ನಿಧನ



ದಾವಣಗೆರೆ ತಾ. ದೊಡ್ಡಬಾತಿ ಗ್ರಾಮದ ವಾಸಿ
ದಿ. ಮಲ್ಲನಗೌಡ ಇವರ ಪುತ್ರ

**ಶ್ರೀ ಪ್ರಭಾಕರ್ ಎಮ್. ಗೌಡ**

ಇವರು ದಿನಾಂಕ : 30.10.2024ರ ಬುಧವಾರ ಸಂಜೆ 7.30ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 45 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಮಕ್ಕಳು, ಮೂವರು ಸಹೋದರಿಯರು, ಮಾವಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ : 31.10.2024ರ ಗುರುವಾರ ಬೆಳಿಗ್ಗೆ 10.30 ರಿಂದ 1.30 ರವರೆಗೆ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ದೊಡ್ಡಬಾತಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ಮೊ : 90085 81336**

॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ, ತಾಲ್ಲೂಕು, ಆನಗೋಡು ಹೋಬಳಿ, ಹಾಲುವರ್ತಿ ಬಡಾವಣೆ ವಾಸಿಗಳಾದ
**ಮಡಿವಾಳರ ಶ್ರೀಮತಿ ಹೊನ್ನಮ್ಮ**
**ಶ್ರೀ ಗುಡದಯ್ಯ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 23-10-2024ನೇ ಬುಧವಾರ ಬೆಳಿಗ್ಗೆ 7-00 ಕ್ಕೆ ನಮ್ಮ ಮಗನಾದ

**ಶ್ರೀ ಗಂಗಾಧರ ಹೆಚ್.ಜಿ.**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆ** ಯನ್ನು
ದಿನಾಂಕ 31-10-2024ನೇ ಗುರುವಾರ ಬೆಳಿಗ್ಗೆ 10-30 ರಿಂದ
**ಮೃತರ ಸ್ವಗೃಹ ಹಾಲುವರ್ತಿ ಬಡಾವಣೆ** ದಾವಣಗೆರೆ ತಾಲ್ಲೂಕು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮ ಗಂಗಾಧರಪ್ಪ
ಚಿ॥ ಪ್ರೇಮಗಂಗು, ಚಿ॥ ಪೃಥ್ವಿಗಂಗು ಹೆಚ್.ಜಿ.
ಮಡಿವಾಳರ ವಂಶಸ್ಥರು ಹಾಲುವರ್ತಿ ಬಡಾವಣೆ ಹಾಗೂ ಬಂಧು-ಮಿತ್ರರು.
ಮೊ.: 8431515414

ವಿ.ಸೂ.: ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಅರುಣ್ ಕುಮಾರ್ ಬೆಳಂಕರ್ ನಿಧನ



ದಾವಣಗೆರೆ, ಮೌನೇಶ್ವರ ಬಡಾವಣೆ ವಾಸಿ ಅರುಣ್ ಕುಮಾರ್ ಬೆಳಂಕರ್ (56) ಇವರು ದಿನಾಂಕ 30.10.2024ರ ರಾತ್ರಿ 10.55ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.10.2024ರ ಗುರುವಾರ ಮಧ್ಯಾಹ್ನ 12.30ಕ್ಕೆ ನಗರದ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

**ನೇತ್ರ ದಾನ ಶ್ರೇಷ್ಠ ದಾನ**

ಮದುವೆ, ಹಬ್ಬ ಹಾಗೂ ಶುಭ ಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ

ಬಟ್ಟೆ ಅಂದರೆ

BSC®

B.S. CHANNABASAPPA & SONS

Since - 1938

ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು



ಸ್ಯಾರೀಸ್ | ಮೆನ್ಸ್‌ವೇರ್ | ಲೇಡಿಸ್‌ವೇರ್ | ಕಿಡ್ಸ್‌ವೇರ್ | ಹೋಮ್ ಫರ್ನಿಶಿಂಗ್

ಬಿ.ಎಸ್.ಚನ್ನಬಸಪ್ಪ & ಸನ್ಸ್

1 ಕಾಳಿಕಾದೇವಿ ರಸ್ತೆ 2 ಪಿ.ಜೆ. ಬಡಾವಣೆ 3 BSC EXCLUSIVE ದಾವಣಗೆರೆ



## ಹಳೆ ಊರಲ್ಲಿನ ಹಳೆಯ ಕಾಲದ ದೀಪಾವಳಿ ಸ್ವಾರಸ್ಯಗಳು...

### ಬಾಲ್ಯದಲ್ಲಿನ ದೀಪಾವಳಿಯ ಕೆಲವು ಸ್ವಾರಸ್ಯಗಳು, ನೆನಪುಗಳು

# 'ಕೊಲಂಬಸ್ ಡಿಸ್ಕವರ್ಡ್ ಅಮೇರಿಕ'!?

**ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

ದೀಪಾವಳಿಯ ಮರುದಿನ ಸಂಜೆ ವ್ಯಾಪಾರ ವ್ಯವಹಾರ ಮಂದವಾಗಿತ್ತು. ವರ್ತಕರೆಲ್ಲಾ ಆರಾಮಾಗಿ ಹರಟೆ ಹೊಡೆಯುತ್ತಿದ್ದರು. ಆ ವೇಳೆಗೆ 'ಸುವ್ವಿ ಬಾ ಸಂಗಯ್ಯಾ...' ಎಂದು ಹಾಡುತ್ತಾ ಸಂಕೇತ ಭಾಷೆಯಲ್ಲಿ ಹೆಸರು ಹೇಳುವವರು ಬೀದಿಯಲ್ಲಿ ಬಂದರು.

ಸಾಮಾನ್ಯವಾಗಿ ಇವರು ಮೂರು ಮಂದಿ ತಲೆಗೆ ತಿಳಿ ಕಾವಿ ಬಣ್ಣದ ಪೇಟ ಸುತ್ತಿಕೊಂಡು, ಅದೇ ಬಣ್ಣದ ಉದ್ದ ತೋಳಿನ ಅಂಗಿ, ಅದರ ಮೇಲೆ ಬಲ ಕಂಕುಳಿನಿಂದ ಎಡ ಹೆಗಲ ಮೇಲೆ ಉತ್ತರೀಯ ಹೊದ್ದು, ಬಿಳಿ ಕಚ್ಚೆ ಪಂಚೆ, ಹಣೆಯ ಮೇಲೆ ವಿಭೂತಿ, ಕೊರಳಲ್ಲಿ ದಪ್ಪ ರುದ್ರಾಕ್ಷಿ ಮಾಲೆ, ಕಿವಿಗಳಿಗೂ ರುದ್ರಾಕ್ಷಿಯ ಓಲೆ ಕಾಸು ಎಡ ಮೊಣಕೈಯಲ್ಲಿ ನೇತು ಬಿದ್ದ ಚಿಕ್ಕ ಜೋಳಿಗೆ. ಇವರಲ್ಲಿ ಒಬ್ಬರು ಎಡ ಕೈಯಲ್ಲಿ ಲಾಟೀನು ಹಿಡಿದು ಮುಂದೆ ಬರುತ್ತಿದ್ದರೆ ಅವರಿಂದ ಹತ್ತಿಪ್ಪತ್ತು ಮಾರು ದೂರದಲ್ಲಿ ಮತ್ತಿಬ್ಬರು ಬೀದಿಯ ಆಚೆ ಪಕ್ಕದಲ್ಲಿ ಚಿಕ್ಕ ತಾಳ ಭಾರಿಸುತ್ತಾ 'ಸುವ್ವಿ ಬಾ ಸಂಗಯ್ಯಾ, ಸುವ್ವಿ ಬಾ ಲಿಂಗಯ್ಯಾ, ಸುವ್ವಿ ಬಾ ಚನ್ನ ಬಸವಯ್ಯ ಸುವ್ವಿ'.. ಎಂದು ಹಾಡುತ್ತಾ ಬರುತ್ತಿರುತ್ತಾರೆ.

ಲಾಟೀನು ಹಿಡಿದು ಬರುವವರಿಗೆ ಯಾರಾದರೂ ಕಾಸು ಕೊಟ್ಟು ತಮ್ಮ ಹೆಸರನ್ನು ಹೇಳಿದರೆ ಈತ ಎಡಗೈಯ ಲಾಟೀನು ಎತ್ತಿ ಹಿಡಿದು, ಬಲಗೈ ಹಸ್ತದಿಂದ ಸಂಕೇತಗಳನ್ನು ತೋರಿಸಿದಾಗ ದೂರದಲ್ಲಿ ತಾಳ ಬಡಿಯುತ್ತಾ ಬರುವವರು ಆ ಹೆಸರನ್ನು ಹೇಳುತ್ತಾರೆ!!. ಉದಾಹರಣೆಗೆ ಕಾಸು ಕೊಟ್ಟವರು 'ದೊಡ್ಡಮನಿ ಶಿವರುದ್ರಪ್ಪ' ಎಂದು ಹೇಳಿದರೆ ಲಾಟೀನು ಹಿಡಿದ ಈತ ಬೆರಳುಗಳನ್ನು ಮಡಚುತ್ತಾ ಬಿಡಿಸುತ್ತಾ ಮೇಲಕ್ಕೆ ಕೆಳಕ್ಕೆ ಅಡ್ಡಕ್ಕೆ ಹಸ್ತವನ್ನು ಆಡಿಸಿ ತೋರಿಸಿದಾಗ ದೂರದಿಂದ ಅದನ್ನು ನೋಡಿದ ತಾಳದವನು 'ದೊಡ್ಮನಿ ಶಿವರುದ್ರಪ್ಪ ಅಲ್ಲೇನ್ರಿ ಮತ್ತಿನ್ನಾರ್ ಹೇಳಯ್ಯ ಸುವ್ವಿ ಬಾ




ಚೆನ್ನಬಸವಯ್ಯ ಸುವ್ವಿ' ಎಂದು ಹೇಳುವನು.

ಒಮ್ಮೊಮ್ಮೆ ಹಸ್ತದಲ್ಲಿ ಸಂಕೇತ ತೋರಿಸುವ ಬದಲು 'ಒಂದು ಜಾಮೂನು ಎರಡು ಇಡ್ಲಿ ಒಂದು ವಡಿ ಅರ್ಧ ಕಾಫಿ' ಹೀಗೆ ಏನೇನೋ ಹೇಳಿದರೂ ಆ ಕಡೆಯವನು ಹಣ ಕೊಟ್ಟವರ ಹೆಸರನ್ನು ಸರಿಯಾಗೇ ಹೇಳುತ್ತಿದ್ದನು!!. ಕೇಳಲು ನೋಡಲು ಇದು ತುಂಬಾ ಮೋಜು. ಹಾಗಾಗಿ ಬಾಲ್ಯದಲ್ಲಿ ನಾವೆಲ್ಲಾ ಇವರು ಬಂದರೆಂದರೆ ಅವರ ಹಿಂದೆ ಬೀದಿ ಉದ್ದಕ್ಕೂ ಹೋಗುತ್ತಿದ್ದೆವು. ಸುಮಾರು 60 ವರ್ಷಗಳ ಕೆಳಗೆ ದೀಪಾವಳಿಯ ಮರುದಿನ ಒಂದು ಸಂಜೆ ಇವರು ಹಳೆ ಊರಿನ ಕಾಯಿಪೇಟೆ ಕಡೆಯಿಂದ ತಂಬಾಕು ಪೇಟೆಗೆ ಬಂದರು. ಅವರಿನ್ನೂ ಮೂಲೆಯ ಸಿಟಿ ಆನಂದ ಭವನ ಹೋಟೆಲ್ ಖಮಿತ್ಕರ್ ಈಶ್ವರಪ್ಪ ಅಂಗಡಿ ಮುಂಭಾಗ ದಾಟಿ ಹೋಲೂರು ಈಶ್ವರಪ್ಪನವರ ಅಂಗಡಿ ಮುಂದೆ ಬರುತ್ತಿದ್ದಂತೆಯೇ ಈ ಕಡೆ ನೀಲಗುಂದ ಬಕ್ಕಪ್ಪ ಹಾಗೂ ಎದುರಿನ ಶಾಮನೂರು ಸಂಗಪ್ಪ ಅಂಗಡಿಗಳ ಮುಂದೆ ನಿಂತ ಕೆಲ ಗುಮಾಸ್ತರು ಮಾತಾಡಿಕೊಂಡರು.

ಹಸ್ತ ಸಂಕೇತ ನೋಡಿ ಹೆಸರುಗಳನ್ನು ಸಲೀಸಾಗಿ ಹೇಳುತ್ತಾರೆ. ಏಕೆಂದರೆ ಅವು ರೂಢಿಯಾಗಿರುತ್ತವೆ. ಈ ಬಾರಿ ನಾವು ಹೆಸರಿನ ಬದಲು ಬೇರೆ ಏನಾದರೂ ಕಷ್ಟಕರವಾದ ಶಬ್ದಗಳನ್ನು ಕೊಡುವುದೆಂದು ನಿರ್ಧರಿಸಿದರು. ಏನು ಕೊಡುವುದೆಂದು ಚರ್ಚಿಸುತ್ತಿದ್ದರು. ಅದೇ ವೇಳೆಗೆ ಕಾಳಿಕಾದೇವಿ ರಸ್ತೆಯಿಂದ ಬಂದು ಪ್ರಕಾಶ್ ಕಾಫಿ ವರ್ಕ್ಸ್ ಕಡೆ ಹೋಗುತ್ತಿದ್ದ ಮುದೇಗೌಡ್ರ ಸಿದ್ಲಿಂಗಪ್ಪನವರು 'ಕೊಡೋದಾದ್ರೆ ಏನಾದ್ರೂ ಇಂಗ್ಲೀಷಿಂದು ಫಾರಿನ್ ದು ಕೊಡ್ರಿ ನೋಡೋಣ' ಎಂದರು.

ಎಲ್ಲರೂ ಸೇರಿ ಅಲ್ಲೇ ಇದ್ದ ಅಜ್ಜಂಪುರದ ರಾಮಣ್ಣ ಶೆಟ್ಟರನ್ನು ಕೇಳಿದರು. 'ಕೊಲಂಬಸ್ ಡಿಸ್ಕವರ್ಡ್ ಅಮೇರಿಕ' ಎಂಬುದನ್ನು ಸೂಚಿಸಿದರು. ಇದು ತುಂಬಾ ಕಷ್ಟ ಅವರಿಂದ ಹೇಳಲು ಸಾಧ್ಯವೇ ಇಲ್ಲ ಎಂದರು ಕೆಲವರು. ಆದರೂ ಪರೀಕ್ಷೆ ಮಾಡೋಣ ಎನ್ನುವಷ್ಟರಲ್ಲಿ ಸುವ್ವಿಯವರು ಅಲ್ಲಿಗೆ ಬಂದೇ ಬಿಟ್ಟರು. ಇವರು ಕಾಸು ಕೊಟ್ಟು ಹೆಸರಿನ ಬದಲು ಇದನ್ನು ಹೇಳಿದರು.

ವಿಚಲಿತನಾಗದ ಲಾಟೀನಿನವ ಹಸ್ತ ಬೆರಳುಗಳಿಂದ ಸಂಕೇತ ತೋರಿಸುತ್ತಲೇ ಆ ಕಡೆ ದೂರದಲ್ಲಿದ್ದ ತಾಳದವನು **'ಕೊಲಂಬಸ್ಸು ಡಿಸ್ಕವರ್ಡು ಅಮೆರಿಕಾ ಅಲ್ವೇನ್ರಿ, ಮತ್ತಿನ್ನೇನು ಹೇಳ್ರಯ್ಯಾ ಸುವ್ವಿ ಬಾ ಚೆನ್ನ ಬಸವಯ್ಯ ಸುವ್ವಿ' ಎಂದು ಹೇಳಿಯೇ ಬಿಟ್ಟ!!!.** ಇದ್ದವರೆಲ್ಲಾ ಬೆರಗಾಗಿ ಭೇಷ್ ಭೇಷ್ ಎಂದು ಮತ್ತಷ್ಟು ದುಡ್ಡು ಕೊಟ್ಟರು.

# ಪೂರ್ವ ಲಡಾಕ್‌ನಲ್ಲಿ ಸೈನ್ಯ ವಾಪಸ್ ಪ್ರಕ್ರಿಯೆ ಪೂರ್ಣ



### ಭಾರತ - ಚೀನಾ ಸೈನ್ಯದ ನಡುವೆ ದೀಪಾವಳಿ ಸಿಹಿ ವಿನಿಮಯ

ನವದೆಹಲಿ, ಅ. 30 - ಪೂರ್ವ ಲಡಾಕ್‌ನ ಡೆಮ್ಚೋಕ್ ಹಾಗೂ ಡೆಪ್ಸಾಂಗ್ ಪ್ರದೇಶಗಳಿಂದ ಸೈನ್ಯ ವಾಪಸ್ ಪಡೆಯುವ ಪ್ರಕ್ರಿಯೆಯನ್ನು ಭಾರತ ಹಾಗೂ ಚೀನಾ ಪೂರೈಸಿವೆ. ಈ ಪ್ರದೇಶಗಳಲ್ಲಿ ಶೀಘ್ರದಲ್ಲಿ ಗಸ್ತು ಆರಂಭಿಸಲಾಗುವುದು ಎಂದು ಭಾರತೀಯ ಸೈನ್ಯದ ಮೂಲಗಳು ತಿಳಿಸಿವೆ.

ನಾಳೆ ಗುರುವಾರ ದೀಪಾವಳಿ ಹಿನ್ನೆಲೆಯಲ್ಲಿ ಉಭಯ ಸೈನ್ಯಗಳು ಸಿಹಿ ವಿನಿಮಯ ಮಾಡಿಕೊಳ್ಳಲಿವೆ ಎಂದೂ ಮೂಲಗಳು ಹೇಳಿವೆ.

ಸೈನ್ಯ ವಾಪಸ್ ಪಡೆದಿರುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಯಾವ ರೀತಿ ಗಸ್ತು ಇರಬೇಕು ಎಂಬುದರ ಬಗ್ಗೆ ಸ್ಥಳದಲ್ಲಿರುವ ಕಮಾಂಡರ್‌ಗಳು ನಿರ್ಧರಿಸಲಿದ್ದಾರೆ. ಈ ಬಗ್ಗೆ ಸ್ಥಳೀಯ ಕಮಾಂಡರ್ ಹಂತದಲ್ಲಿ ಮಾತುಕತೆ ನಡೆಯಲಿದೆ ಎಂದು ಸೈನ್ಯದ ಮೂಲಗಳು ತಿಳಿಸಿವೆ.

ಸೈನ್ಯ ವಾಪಸ್ ಪಡೆಯುವ ಪ್ರಕ್ರಿಯೆ ಅಕ್ಟೋಬರ್ 28 ಇಲ್ಲವೇ 29ರಲ್ಲಿ ಪೂರ್ಣಗೊಳ್ಳಲಿದೆ ಎಂದು ಕಳೆದ ಅಕ್ಟೋಬರ್ 25ರಂದು ಸೈನ್ಯದ ಮೂಲಗಳು ತಿಳಿಸಿದ್ದವು.

ಕಳೆದ ವಾರ ಕಾರ್ಪ್ಸ್ ಕಮಾಂಡರ್ ಹಂತದ ಮಾತುಕತೆಯ ವೇಳೆ ಸೈನ್ಯವನ್ನು ವಾಪಸ್ ಕರೆಸಿಕೊಳ್ಳುವ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಇದಕ್ಕೂ ಮೊದಲು ರಾಯಭಾರಿ ಹಾಗೂ ಸೈನ್ಯದ ಹಂತದಲ್ಲಿ ಮಾತುಕತೆ ನಡೆದು ಒಪ್ಪಂದಕ್ಕೆ ಬರಲಾಗಿತ್ತು.

ಜೂನ್ 2020ರಲ್ಲಿ ಗೆಲ್ವನ್ ಕಣಿವೆಯಲ್ಲಿ ಭಾರತ ಹಾಗೂ ಚೀನಾ ಸೈನಿಕರ ನಡುವೆ ಘರ್ಷಣೆ ಉಂಟಾಗಿತ್ತು. ಇದರಿಂದಾಗಿ ದಶಕಗಳ ನಂತರ ಉಭಯ ಸೈನ್ಯಗಳ ನಡುವೆ ತೀವ್ರ ಉದ್ವಿಗ್ನತೆ ಉಂಟಾಗಿತ್ತು. ಒಪ್ಪಂದದ ನಂತರ 2020 ಕ್ಕಿಂತ ಮುಂಚಿನ ಪರಿಸ್ಥಿತಿಗೆ ಮರಳಲು ಉಭಯ ದೇಶಗಳು ಸಮ್ಮತಿಸಿವೆ.

# ಜಿಲ್ಲಾ ಬಿಜೆಪಿಯಿಂದ ನಗರದಲ್ಲಿ ಏಕತಾ ಓಟ



ದಾವಣಗೆರೆ, ಅ.30- ನಗರದ ಡಾ. ಎಂ.ಸಿ. ಮೋದಿ ವೃತ್ತದಲ್ಲಿ ಮಂಗಳವಾರ ಸರ್ದಾರ್ ವಲ್ಲಭಬಾಯಿ ಪಟೇಲ್ ಹಾಗೂ ಬಿರ್ಸಾ ಮುಂಡಾ ಜಯಂತಿ ಅಂಗವಾಗಿ ಜಿಲ್ಲಾ ಬಿಜೆಪಿಯಿಂದ ಏಕತಾ ಓಟ ನಡೆಯಿತು. ಮುಖಂಡರುಗಳಾದ ಯಶವಂತರಾವ್ ಜಾಧವ್, ಹನಗವಾಡಿ ವೀರೇಶ್, ಎಸ್.ಟಿ. ವೀರೇಶ್, ಅಜಯ್‌ಕುಮಾರ್, ಅಣ್ಣೇಶ್ ಐರಣಿ, ಬಿ.ಎಸ್. ಜಗದೀಶ್, ಕೆ.ಎಂ. ವೀರೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕಡಿಮೆ ನೀರು ಬಳಸಿ ಹೆಚ್ಚು ಭತ್ತ ಬೆಳೆದ ಪ್ರಗತಿಪರ ರೈತ ದ್ಯಾಮಪ್ಪ

### ಭತ್ತದ ಬೆಳೆ ಕ್ಷೇತ್ರೋತ್ಸವದಲ್ಲಿ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಪ್ರಶಂಸೆ

ದಾವಣಗೆರೆ, ಅ.30 - ಮಳೆಯಾಶ್ರಿತ ಪ್ರದೇಶವಾದ ಹಾಲುವರ್ತಿ ಗ್ರಾಮದಲ್ಲಿ ಕಡಿಮೆ ನೀರು ಬಳಸಿ ಭತ್ತ ಬೆಳೆಯಲಾಗಿದ್ದು, ಉತ್ತಮ ಇಳುವರಿ ಬಂದಿದೆ ಎಂದು ಬೇಸಾಯ ತಜ್ಞ ಬಿ.ಓ ಮಲ್ಲಿಕಾರ್ಜುನ್ ಪ್ರಶಂಸೆ ವ್ಯಕ್ತಪಡಿಸಿದರು.

ತಾಲ್ಲೂಕಿನ ಹಾಲುವರ್ತಿ ಗ್ರಾಮದಲ್ಲಿ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಆತ್ಮ ಯೋಜನೆ, ಕೃಷಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ನೇರ ಕೂರಿಗೆ ಭತ್ತ ಬಿತ್ತನೆಯ ಕ್ಷೇತ್ರೋತ್ಸವದಲ್ಲಿ ಅವರು ಮಾತನಾಡಿದರು.

ಇಲ್ಲಿ ಭತ್ತ ಪ್ರಮುಖವಾದ ಆಹಾರ ಬೆಳೆಯಾಗಿದ್ದು, ಪ್ರಗತಿಪರ ಕೃಷಿಕ ದ್ಯಾಮಪ್ಪ ಅವರು ಮಳೆಯಾಶ್ರಿತ ಪ್ರದೇಶದಲ್ಲಿ ಎಕರೆಗೆ 8 ರಿಂದ 10 ಕೆ.ಜಿ. ಬೀಜ, ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡಿ, ಬಿತ್ತನೆ ಸಮಯದಲ್ಲಿ ರಾಸಾಯನಿಕ ಗೊಬ್ಬರದ ಬಳಕೆ ಹಾಗೂ ಲಘು ಪೋಷಕಾಂಶಗಳಾದ ಜಿಂಕ್ ಮತ್ತು ಕಬ್ಬಿಣ ಎಕರೆಗೆ 8 ಕೆ.ಜಿ ಬಳಸಿ, ನೀರು ನಿಲ್ಲಿಸದೆ, ಬೆಳೆಗೆ ತುರ್ತು ಅಗತ್ಯ ಇರುವ ಸಮಯದಲ್ಲಿ ಮಾತ್ರ ನೀರನ್ನು ಬಳಸಿ ಉತ್ತಮವಾದ ಭತ್ತವನ್ನು ಬೆಳೆದಿದ್ದಾರೆ.

ಒಂದು ಕೆ.ಜಿ ಭತ್ತ ಉತ್ಪಾದನೆ ಮಾಡಬೇಕಾದರೆ 5000 ಲೀಟರ್ ನೀರು ಬೇಕಾಗುತ್ತದೆ. ಈ ಪದ್ಧತಿಯಲ್ಲಿ 1500 ಲೀಟರ್ ನಷ್ಟು ಮಾತ್ರ ನೀರು ಬೇಕಾಗುತ್ತದೆ. ಹಾಗಾಗಿ ಇವರು ಕಡಿಮೆ ಉತ್ಪಾದನಾ ವೆಚ್ಚದಲ್ಲಿ ಹಾಗೂ ಮಳೆಯಾಶ್ರಿತ ಪ್ರದೇಶದಲ್ಲಿ ಭತ್ತವನ್ನು ಕಡಿಮೆ ನೀರು ಬಳಸಿ, ಬೆಳೆದು ತೋರಿಸಿರುತ್ತಾರೆ ಎಂದು ತಿಳಿಸಿದರು.

ಪ್ರಗತಿಪರ ಹಾಗೂ ಭತ್ತ ಬೆಳೆದ ಕೃಷಿಕ ದ್ಯಾಮಣ್ಣ ಮಾತನಾಡುತ್ತಾ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ ಸಲಹೆ ಪಡೆದುಕೊಂಡು, ಬಿತ್ತನೆಯಿಂದ ಹಿಡಿದು ಕಟಾವಿನವರೆಗೂ ಮಾಹಿತಿಯನ್ನು ಪಡೆದುಕೊಂಡು ಭತ್ತವನ್ನು ಬೆಳೆದಿರುತ್ತೇನೆ. ಎಕರೆಗೆ 20 ರಿಂದ 22 ಕ್ವಿಂಟಾಲ್ ಇಳುವರಿ ಬರಬಹುದು ಎಂದರು. ಇದು ನನ್ನ ಎರಡನೇ ಯಶಸ್ವಿ ಪ್ರಯತ್ನವಾಗಿದೆ ಎಂದರು.

ಈ ಪದ್ಧತಿಯನ್ನು ಮಾಡುವುದರಿಂದ ಮಣ್ಣಿನ ಫಲ ವತ್ತತೆಯನ್ನು ಹಾಗೂ ಮನೆಗೆ ಬೇಕಾಗುವಷ್ಟು ಭತ್ತವನ್ನು ಸುಲಭವಾಗಿ ಬೆಳೆದುಕೊಳ್ಳಬಹುದು ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಗತಿಪರ ಕೃಷಿಕರು ಹಾಗೂ ಮಹಿಳೆಯರು ನಡೆಸಿಕೊಟ್ಟರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀಧರ್ ಮೂರ್ತಿ ಮಾತನಾಡಿ, ಕೃಷಿ ಇಲಾಖೆಯಲ್ಲಿ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ರೈತರು ಹೆಚ್ಚಿನ ಇಳುವರಿ ಮತ್ತು ಆದಾಯವನ್ನು ಪಡೆದುಕೊಳ್ಳಬೇಕು. ಪ್ರಸ್ತುತ ಮುಂಗಾರಿನಲ್ಲಿ ತೊಗರಿ ಬೆಳೆ ಹೆಚ್ಚಾಗಿದ್ದು, ಸರಿಯಾದ ಸಂರಕ್ಷಣಾ ಕ್ರಮವನ್ನು ಮಾಡುವುದರಿಂದ ಉತ್ತಮ ಇಳುವರಿ ಪಡೆಯಬಹುದು ಎಂದರು.

ಆತ್ಮಯೋಜನೆಯ ಅಧಿಕಾರಿಗಳಾದ ವೆಂಕಟೇಶ್, ರೇಷ್ಮಾ, ಪ್ರಗತಿಪರ ಕೃಷಿಕರು ಹಾಗೂ ಕೃಷಿ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ ಪೂಜೆ



ದಾವಣಗೆರೆ, ಅ. 30- ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬರುವ ನವೆಂಬರ್ 1ರ ದೀಪಾವಳಿ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಮಂಜುನಾಥ್ ಗುಂಡಾಲ್ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

ಬರುವ ಡಿಸೆಂಬರ್ 15 ರ ಭಾನುವಾರ ಹೊಸ್ತಿಲ ಹುಣ್ಣಿಮೆ ಹಾಗೂ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಜಯಂತ್ಯೋತ್ಸವ ಪ್ರಯುಕ್ತ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿದ್ದು, ಶ್ರೀಮತಿ ಲಕ್ಷ್ಮಮ್ಮ ಮತ್ತು ಸಹ ಕುಟುಂಬದವರು ಬಿ.ಹೆಚ್. ಗ್ರೂಪ್‌ನವರು ಪ್ರಧಾನ ಸೇವಾಕರ್ತರಾಗಿದ್ದಾರೆ. ಬರುವ 2025, ಫೆಬ್ರವರಿ 4 ರಂದು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ 27ನೇ ವಾರ್ಷಿಕೋತ್ಸವ ನಡೆಸಲು ಸಂಕಲ್ಪ ಹೊಂದಿದ್ದು, ತತ್ಸಂಬಂಧ ಸುಹಾಸಿನಿಯರ ಹಸ್ತದಿಂದ ದಿ. 16.11.2024 ರಿಂದ ಪ್ರತಿ ಶನಿವಾರ ಸಂಜೆ 5ಕ್ಕೆ ದೇವಸ್ಥಾನದಲ್ಲಿ ಶ್ರೀ ವಿಷ್ಣುವಿಗೆ ಕ್ಷೀರಾಭಿಷೇಕ ನಂತರ ತುಳಸಿ ಅರ್ಚನೆ, ಹನುಮಾನ್ ಚಾಲೀಸ ಪಠಣ ಹಾಗೂ ಉಯ್ಯಾಲೋತ್ಸವವನ್ನು ನೆರವೇರಿಸಲಾಗುವುದು.

# ಸಿದ್ದರಾಮಯ್ಯ ವಿರುದ್ಧ ಅಬ್ರಾಹಂ ಮಾನನಷ್ಟ ಪ್ರಕರಣ

ಬೆಂಗಳೂರು, ಅ. 30 - ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮನ್ನು ಬ್ಲಾಕ್‌ಮೇಲರ್ ಎಂದು ಹೇಳಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ಮಾನನಷ್ಟ ಪ್ರಕರಣ ದಾಖಲಿಸಿರುವುದಾಗಿ ವಕೀಲ ಕಾರ್ಯಕರ್ತ ಟಿ.ಜೆ. ಅಬ್ರಾಹಂ ತಿಳಿಸಿದ್ದಾರೆ.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಬ್ರಾಹಂ ಸೇರಿದಂತೆ ಹಲವರು ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರ ಬಳಿ ದೂರು ಸಲ್ಲಿಸಿದರು.

ಸಿದ್ದರಾಮಯ್ಯ ಅವರು ಸಾರ್ವಜನಿಕವಾಗಿ ನನ್ನ ವಿರುದ್ಧ ಹೇಳಿಕೆ ನೀಡಿದ್ದಾರೆ. ನನ್ನನ್ನು ಬ್ಲಾಕ್‌ಮೇಲರ್ ಹಾಗೂ ಕೆಟ್ಟ ಹಿನ್ನೆಲೆಯ ವ್ಯಕ್ತಿ ಎಂದು ಹೇಳಿದ್ದಾರೆ ಎಂದು ಅಬ್ರಾಹಂ ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರು ಬೋಗಸ್ ಹಾಗೂ ಅಕ್ರಮ ಕ್ಲೇಮುಗಳ ಮೂಲಕ 14 ನಿವೇಶನಗಳನ್ನು ಪಡೆದಿದ್ದಾರೆ. ಅವರು ನನ್ನನ್ನು ಬ್ಲಾಕ್‌ಮೇಲರ್ ಎಂದು ಹೇಳುತ್ತಿದ್ದಾರೆ. ಅವರ ಹೇಳಿಕೆ ವಿರುದ್ಧ ನಾನು ಮಾನನಷ್ಟ ಪ್ರಕರಣ ದಾಖಲಿಸಿದ್ದೇನೆ ಎಂದು ಅಬ್ರಾಹಂ ತಿಳಿಸಿದ್ದಾರೆ.

# ಸಲ್ಮಾನ್ ಖಾನ್‌ಗೆ ಮತ್ತೆ ಪ್ರಾಣ ಬೆದರಿಕೆ, ಓರ್ವನ ಬಂಧನ



ಮುಂಬೈ, ಅ. 30 - ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ 2 ಕೋಟಿ ರೂ.ಗಳ ಹತ್ಯೆ ಬೆದರಿಕೆ ಎದುರಾಗಿದೆ. ಈ ಬಗ್ಗೆ ಮುಂಬೈ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ.

ಈ ಹಿಂದೆ, ಖಾನ್ ಅವರಿಗೆ ಬೆದರಿಕೆ ಹಾಕುವ ಮೆಸೇಜ್ ಅನ್ನು ಮುಂಬೈ ಮುಂಬೈ ಸಂಚಾರಿ ಪೊಲೀಸರಿಗೆ ಕಳಿಸಲಾಗಿತ್ತು. ನಟ 5 ಕೋಟಿ ರೂ. ಕೊಡದೇ ಇದ್ದರೆ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಲಾಗಿತ್ತು.

ಈ ಬಗ್ಗೆ ಗುರುತಿಸಲಾಗದ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.

ಈ ನಡುವೆ, ಮಂಗಳವಾರ ಮತ್ತೆ 2 ಕೋಟಿ ರೂ.ಗಳ ಬೆದರಿಕೆ ಮೆಸೇಜ್ ಕಳಿಸಲಾಗಿದೆ.

ಮೆಸೇಜ್ ಕಳಿಸಿದ ಅಜಮ್ ಮೊಹಮ್ಮದ್ ಮುಸ್ತಫ ಎಂಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಮುಸ್ತಫಾ ಬಾಂದ್ರಾದಲ್ಲಿರುವ ಬ್ಲೂ ಫೇಮ್ ಅಪಾರ್ಟ್‌ಮೆಂಟ್ ನಿವಾಸಿಯಾಗಿದ್ದಾನೆ. ಇದೇ ಪ್ರದೇಶದಲ್ಲೇ ಸಲ್ಮಾನ್ ಖಾನ್ ಮನೆಯೂ ಇದೆ. ಸೋಮವಾರದದಂದು ಮುಂಬೈ ಪೊಲೀಸರು ಉತ್ತರ ಪ್ರದೇಶದ ನೊಯ್ಡಾದಲ್ಲಿ ಬೆದರಿಕೆ ಹಾಕಿದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದರು. ಈತ ಖಾನ್ ಅಷ್ಟೇ ಅಲ್ಲದೇ, ಎನ್.ಸಿ.ಪಿ. ನಾಯಕ ಜೀಶಾನ್ ಸಿದ್ದಿಕ್ ಅವರಿಗೂ ಬೆದರಿಕೆಯ ಮೆಸೇಜ್ ಕಳಿಸಿದ್ದ.

ಸಲ್ಮಾನ್ ಖಾನ್ ಅವರಿಗೆ ಈ ಹಿಂದೆ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನಿಂದ ಬೆದರಿಕೆ ಎದುರಾಗಿತ್ತು. ಈ ತಂಡದ ಶಂಕಿತ ಸದಸ್ಯರು ಏಪ್ರಿಲ್ ತಿಂಗಳಲ್ಲಿ ಸಲ್ಮಾನ್ ಖಾನ್ ಅವರ ಬಾಂದ್ರಾ ನಿವಾಸದ ಹೊರಗೆ ಗುಂಡು ಹಾರಿಸಿದ್ದರು. ಖಾನ್ ಹತ್ಯೆಗಾಗಿ ಬಿಷ್ಣೋಯಿ ತಂಡ ಸಂಚು ನಡೆಸಿದ್ದನ್ನು ನವಿ ಮುಂಬೈ ಪೊಲೀಸರು ಕೆಲ ತಿಂಗಳ ಹಿಂದೆ ಬಯಲಿಗೆ ಎಳೆದಿದ್ದರು. ನಂತರ ಖಾನ್ ಭದ್ರತೆಯನ್ನು ಹೆಚ್ಚಿಸಲಾಗಿತ್ತು.

# ಖಾಸಗಿ ಭೇಟಿಗಾಗಿ ಬ್ರಿಟನ್ ದೊರೆ ಚಾರ್ಲ್ಸ್ ಬೆಂಗಳೂರಿಗೆ

ಬೆಂಗಳೂರು, ಅ. 30 - ಬ್ರಿಟನ್ ರಾಜ ಚಾರ್ಲ್ಸ್ ಅವರು ಬೆಂಗಳೂರಿಗೆ ಮೂರು ದಿನಗಳ ಖಾಸಗಿ ಭೇಟಿಗೆ ಆಗಮಿಸಿದ್ದಾರೆ. ಇಲ್ಲಿನ ಸಮಗ್ರ ವೈದ್ಯಕೀಯ ಕೇಂದ್ರದಲ್ಲಿ ಅವರು ಉಳಿದುಕೊಂಡಿ ದ್ದಾರೆ ಎಂದು ಮೂಲಗಳು ತಿಳಿಸಿವೆ. ಅವರ ಜೊತೆಗೆ ರಾಣಿ ಕ್ಯಾಮಿಲ್ಲಾ ಸಹ ಬಂದಿದ್ದಾರೆ. ಅವರು ಉಳಿದುಕೊಂಡಿರುವ ಸೌಖ್ಯ ಆರೋಗ್ಯ ಕೇಂದ್ರವು ಯೋಗ, ಧ್ಯಾನಗಳ ಜೊತೆಗೆ ಚೈತನ್ಯಕಾರಿ ಚಿಕಿತ್ಸೆಗೆ ಹೆಸರಾಗಿದೆ.

ವೈಟ್‌ಫೀಲ್ಡ್‌ನಲ್ಲಿರುವ ಸೌಖ್ಯ ಕೇಂದ್ರಕ್ಕೆ ದೊರೆ ಚಾರ್ಲ್ಸ್ ಈ ಹಿಂದೆ 2019ರಲ್ಲೂ ಭೇಟಿ ನೀಡಿ ದ್ದರು. ಚಾರ್ಲ್ಸ್ ಅವರು ಹಲವಾರು ವರ್ಷಗಳಿಂದ ಆಯುರ್ವೇದದ ಪ್ರತಿಪಾದಕರಾಗಿದ್ದಾರೆ.

# ಭಾರತಾಂಬೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಬಿಜೆಪಿ ಪರಿಷತ್ ಸದಸ್ಯ

ಬೆಂಗಳೂರು, ಅ. 30 - ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಉಪಚುನಾವಣೆಯಲ್ಲಿ ಆಯ್ಕೆಯಾದ ಬಿಜೆಪಿಯ ಕಿಶೋರ್ ಕುಮಾರ್ ಪುತ್ತೂರು ಅವರು ಇಂದು ವಿಧಾನಪರಿಷತ್‌ನ ನೂತನ ಸದಸ್ಯರಾಗಿ ಭಗವಂತ ಹಾಗೂ ತಾಯಿ ಭಾರತಾಂಬೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣ ಮಿತಿಮೀರಿದೆ, ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಿದೆ, ವಕ್ಫ್ ಹೆಸರಿನಲ್ಲಿ ರೈತರ ಭೂಮಿಯನ್ನು ಕಬಳಿಸುವ ಕಾರ್ಯ ನಡೆಯುತ್ತಿದೆ ಎಂದರು.

# ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ಇಂದಿರಾ ಗಾಂಧಿ ಪುಣ್ಯ ಸ್ಮರಣೆ

ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಮಾಜಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರ ಪುಣ್ಯಸ್ಮರಣೆಯು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11-30ಕ್ಕೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

**ಬೆಳ್ಳಿ ಫೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ಧೇಶ್ವರ ಸ್ವಾಮಿ ಸಣ್ಣ ಪ್ಯೂರ್ ಬೆಳ್ಳಿ ಫೋಟೋಗಳು ರೂ. 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ತಾಳಿ, ಬೊಟ್ಟು, ಸರ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : 99451 59582

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟ್ ಮಾರಾಟಕ್ಕೆ**
1) ಕರ್ನಾಟಕ ಗೃಹ ಮಂಡಳಿ 120 ರಸ್ತೆಗೆ ಉತ್ತರ (84 Lakh)
2) ಶಿವ-ಪಾರ್ವತಿ 40x58.5 ಪಶ್ಚಿಮ (96 ಲಕ್ಷ)
3) J.H. PATEL 30X50 ಉತ್ತರ (78 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ನೇರವಾಗಿ ಮಾಲೀಕರು. ಅರ್ಧ ಪರ್ಸೆಂಟ್ ಕಮೀಷನ್)

**ಮಾರಾಟಕ್ಕಿದೆ**
ಕಾರ್ನರ್ ಸೈಟ್ 41x45, ಸರ್ಕಾರಿ ನೌಕರರ ಬಡಾವಣೆ, ಪಿ.ಬಿ. ರಸ್ತೆ ಬಳಿ ಮಾರಾಟಕ್ಕಿದೆ.
81054 25694, 79755 95836

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ತೋಟ ನೋಡಿಕೊಳ್ಳಲು ಒಂದು ಕುಟುಂಬ ಬೇಕಾಗಿದೆ. ಅನುಭವವಿದ್ದವರಿಗೆ ಆದ್ಯತೆ.
94484 39639

**ಮಾರಾಟಕ್ಕೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20X30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
94484 39639

**2 BHK HOUSE FOR RENT**
Immediately
4th Main, 4th Cross, Anjaneya Badavane.
M : 95385 60397

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,**
GST & Income Tax ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
Mob: 94838 62779

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ದಾವಣಗೆರೆ - 4. ಸಂಪರ್ಕಿಸಿ :
84948 20288

**ಗಾರ್ಡನ್ ರೆಸ್ಟೋರೆಂಟ್ ಬಾಡಿಗೆಗೆ ಇದೆ**
ದಾವಣಗೆರೆಯಿಂದ 18 ಕಿ.ಮೀ. ದೂರದಲ್ಲಿರುವ ರೆಸ್ಟೋರೆಂಟ್ ನಡೆಸಲು ಬೇಕಾಗಿರುವ ಎಲ್ಲಾ ಸಾಮಾನುಗಳು ಇರುವ ರೆಸ್ಟೋರೆಂಟ್ ಬಾಡಿಗೆಗೆ ಇದೆ.
94483 38709, 74830 48533

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಸಪ್ಲೈಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ. ಜಯನಗರ 'ಬಿ' ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ. ಸಂಪರ್ಕಿಸಿ :
99861 62462, 97420 97140

**WANTED**
Receptionist Cum Telecaller for professional Gym
Good kannada & English knowledge willing to work on sunday also (female only)
Salary 15,000 to 20,000
Part time also available
93536-26664

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009
98458 61220

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**WANTED**
2 Female Office Assistant In Auditor Office Tally and GST Work Must Required.
Muslim Hostel Complex Chetana Hotel Road Davanagere
M : 9845692988

**ಬೇಕಾಗಿದ್ದಾರೆ**
ಹೋಟೆಲ್ ಫುಡ್ಡೀಸ್
ಚರ್ಚ್ ರೋಡ್, ತೊಗಟವೀರ ಕಲ್ಯಾಣಮಂಟಪ ಹತ್ತಿರ,
ಲೇಡೀಸ್ ಡಿಸ್‌ವಾಶ್, ಕ್ಯಾಪ್ಟನ್, ಬಿಲ್ಲಿಂಗ್, ವೈಟರ್
98861 56688

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere
2) Charlie Pailwan Road, Davangere.
Contact: 99167 36057, 95350 51589

# ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಅರ್ಥಪೂರ್ಣ ವಸ್ತು ಪ್ರದರ್ಶನ





ದಾವಣಗೆರೆ, ಅ.30- ಇಲ್ಲಿಗೆ ಸಮೀಪದ ಗೋಣಿವಾಡದ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯದಲ್ಲಿ 'ಭಾರತ ಮತ್ತು ಇದರ ಪರಂಪರೆ' ಎಂಬ ಧ್ಯೇಯ ವಾಕ್ಯದೊಂದಿಗೆ ಸಮಾಜ-ವಿಜ್ಞಾನ ವಸ್ತುಪ್ರದರ್ಶನ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾರತಾಂಬೆಗೆ ದೀಪ ಬೆಳಗುವುದರ ಮೂಲಕ ಉದ್ಘಾಟನೆ ನೆರವೇರಿಸಿದ ಪ್ರಾಂಶುಪಾಲರಾದ ವೀಣಾರವರು ಮಕ್ಕಳಿಗೆ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನಾವಳಿಗಳ ಮಹತ್ವ ವಿವರಿಸಿದರು.

9 ಮತ್ತು 10ನೇ ತರಗತಿ ವಿದ್ಯಾರ್ಥಿಗಳು ಸಂವಿಧಾನದ ಪ್ರಸ್ತಾವನೆಯನ್ನು ಮಂಡಿಸಿದರು. ಸಾಮಾಜಿಕ ಅರಿವು, ಸ್ವಾವಲಂಬನೆ, ಹೊಸತನ ಹಾಗೂ ಐತಿಹಾಸಿಕ ಪರಂಪರೆಯನ್ನು ಉಳಿಸಿ ಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವೆಂದು ಸಮಾಜ-ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಮಮತಾ ಅವರು ಮಕ್ಕಳಿಗೆ ಅರ್ಥೈಸಿದರು.

ಕಾರ್ಯಕ್ರಮದಲ್ಲಿ ಒನಕೆ ಓಬವ್ವ, ಕಿತ್ತೂರಿನ ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿರಾಯಣ್ಣ ವೇಷ ಧರಿಸಿದ ಮಕ್ಕಳು ಅಮೋಘ ಅಭಿನಯದ ಮೂಲಕ ಗಮನ ಸೆಳೆದರು. ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರರ ವೇಷದಲ್ಲಿ ಎಲ್ಲರ ಗಮನ ಸೆಳೆದರು. ಈ ಪ್ರದರ್ಶನದಲ್ಲಿ ವಿಧಾನಸೌಧ, ನೀತಿ ಆಯೋಗ, ಯು.ಪಿ.ಎಸ್.ಸಿ. ಹಾಗೂ ಕೆ.ಪಿ.ಎಸ್.ಸಿ., ನಾಗರಿಕತ್ವ, ಭಾಕ್ರಾನಂಗಲ್ ಡ್ಯಾಂ, ಸೌರ ವ್ಯೂಹ, ಜಾಮೀಯ ಮಸೀದಿ, ಬೀದರ್ ಕೋಟೆ, ಕಿತ್ತೂರಿನ ಕೋಟೆ ಹೀಗೆ ಹಲವು ಮಾದರಿಗಳು ಮಕ್ಕಳಿಗೆ ತಿಳಿಯಲು ಉತ್ತಮ ವೇದಿಕೆಯಾಗಿ ಮಾರ್ಪಟ್ಟಿತ್ತು.

ಈ ಪ್ರದರ್ಶನದಲ್ಲಿ ತೀರ್ಪುಗಾರರಾಗಿ ಆಗಮಿಸಿದ್ದ ಗಣೇಶ್ ಹಾಗೂ ಶ್ರೀಮತಿ ಉಮಾ ರವರು, ಮಕ್ಕಳು ಅವರ ಮಾದರಿಗಳ ಬಗ್ಗೆ ನೀಡಿದ ವಿವರಣೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಸಮಸ್ತ ಸಿಬ್ಬಂದಿ ಉಪಸ್ಥಿತರಿದ್ದರು.

# ಪರಿಸರ ಸ್ನೇಹಿಯಾಗಿ ದೀಪಾವಳಿ ಆಚರಿಸಲು ಜಿಲ್ಲಾಧಿಕಾರಿ ಕರೆ



ದಾವಣಗೆರೆ, ಅ.30- ದೀಪಾವಳಿ ಹಬ್ಬವನ್ನು ಜಿಲ್ಲೆಯಾದ್ಯಂತ ನಾಳೆ ದಿನಾಂಕ 31 ಮತ್ತು 2 ರಂದು ಸಡಗರದಿಂದ ಆಚರಿಸಲಾಗುತ್ತಿದ್ದು, ಹಬ್ಬದ ಸಂದರ್ಭದಲ್ಲಿ ಸಿಡಿಸುವ ಪಟಾಕಿಗಳು ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯ ಉಂಟು ಮಾಡಿ ಪರಿಸರಕ್ಕೆ ಹಾನಿ ಮಾಡುತ್ತಿದೆ ಆದ್ದರಿಂದ ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಸರಳ ರೀತಿಯಲ್ಲಿ ಮಾಲಿನ್ಯ ರಹಿತವಾಗಿ ಮತ್ತು ಭಕ್ತಿ ಪೂರ್ವಕವಾಗಿ ಆಚರಿಸಲು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮನವಿ ಮಾಡಿದ್ದಾರೆ.

ಪಟಾಕಿ ಬಾಕ್ಸ್‌ಗಳ ಮೇಲೆ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್‌ಐಆರ್) ಮತ್ತು ನ್ಯಾಷನಲ್ ಎನ್ವಿರಾನ್‌ಮೆಂಟಲ್ ಇಂಜಿನಿಯರಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಎನ್‌ಇಇಆರ್‌ಐ) ಇವರ ಲೋಗೋ ಹಾಗೂ ನೋಂದಾಯಿತ ಸಂಖ್ಯೆಯೊಂದಿಗೆ ಮುದ್ರಿತವಾಗಿರಬೇಕು. ನಿಗದಿಪಡಿಸಿರುವ ದಿನಾಂಕ ಮತ್ತು ಸ್ಥಳಗಳಲ್ಲಿ ಮಾತ್ರ ತಾತ್ಕಾಲಿಕ ಪಟಾಕಿ ಅಂಗಡಿಗಳನ್ನು ಇಡಬೇಕು.

125 ಡೆಸಿಬಲ್ ಶಬ್ದಕ್ಕಿಂತಲೂ ಮೇಲ್ಪಟ್ಟ ಪಟಾಕಿಗಳ ಸಿಡಿಸುವುದನ್ನು ನಿಷೇಧಿಸಲಾಗಿದೆ.

ಶಿಕ್ಷಣ ಸಂಸ್ಥೆ, ಆಸ್ಪತ್ರೆ ಮತ್ತು ವೃದ್ಧಾಶ್ರಮಗಳಂತಹ ಸೂಕ್ಷ್ಮ ಪ್ರದೇಶಗಳ ಹತ್ತಿರ ಪಟಾಕಿ ಸಿಡಿಸುವುದನ್ನು ನಿಷೇಧಿಸಲಾಗಿದೆ.

ರಾತ್ರಿ 8 ರಿಂದ 10 ವರೆಗೆ ಮಾತ್ರ ಪಟಾಕಿಗಳನ್ನು ಸ್ಫೋಟಿಸಲು ಅವಕಾಶ ನೀಡಿದ್ದು, ಉಳಿದ ಸಮಯದಲ್ಲಿ ಪಟಾಕಿಗಳ ಸ್ಫೋಟವನ್ನು ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ಇಂದಿರಾಗಾಂಧಿ ಪುಣ್ಯ ಸ್ಮರಣೆ



ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ (ಡಾ. ಶಾಮನೂರು ಶಿವಶಂಕರಪ್ಪ ಭವನ) ಮಾಜಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರ ಪುಣ್ಯಸ್ಮರಣೆಯು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11-30ಕ್ಕೆ ನಡೆಯಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

# ನಾಳೆಯಿಂದ ಕೆಎಸ್‌ಪಿಎಲ್ ಟೂರ್ನಿ ಆರಂಭ

ದಾವಣಗೆರೆ, ಅ.30- ಬೆಂಗಳೂರಿನ ಆಚಾರ್ಯ ಕ್ರೀಡಾಂಗಣದಲ್ಲಿ ನ.1 ರಿಂದ ಡಿ.1ರ ವರೆಗೆ ಒಂದು ತಿಂಗಳ ಕಾಲ ಕರ್ನಾಟಕ ಸಾಫ್ಟ್‌ಬಾಲ್ ಪ್ರೀಮಿಯರ್ ಲೀಗ್ (ಕೆಎಸ್‌ಪಿಎಲ್) ಟೂರ್ನಿ ಆಯೋಜಿಸಲಾಗಿದೆ ಎಂದು ಕರ್ನಾಟಕ ಸ್ಟೇಟ್ ಸಾಫ್ಟ್‌ಬಾಲ್ ಕ್ರಿಕೆಟ್ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷ ಗಂಗಾಧರ್ ರಾಜು ತಿಳಿಸಿದ್ದಾರೆ.

ಕೆಎಸ್‌ಪಿಎಲ್-2024 ಟೂರ್ನಿಯೂ ಕರ್ನಾಟಕದ ಕ್ರಿಕೆಟ್ ಜಗತ್ತಿನಲ್ಲಿ ಮಹತ್ವದ್ದಾಗಿದೆ. 31 ಜಿಲ್ಲೆಗಳಿಂದ 32 ತಂಡಗಳು ಹಾಗೂ 699 ಆಟಗಾರರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಈ ವೇಳೆ ಅಸೋಸಿಯೇಷನ್‌ನ ಪ್ರಮುಖರಾದ ನವೀನ್, ಅರ್ಪಿತ್, ರಿಯಾಜ್, ಮಂಜುನಾಥ್, ರವಿಕುಮಾರ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ಕಣ್ಣಿಗೆ ಪಟಾಕಿ ಪೆಟ್ಟು ತಪ್ಪಿಸೋಣ : ಕಣ್ಣಿನ ಸುರಕ್ಷತೆಗೆ ಮುನ್ನೆಚ್ಚರಿಕೆ

'ಹಬ್ಬದ ಸಮಯದಲ್ಲಿ ಪಟಾಕಿ ಹಚ್ಚುವುದು ನಮ್ಮಲ್ಲಿ ಸಾಮಾನ್ಯ. ಆದರೆ, ಪಟಾಕಿಗಳನ್ನು ಸಫಲವಾಗಿ ಬಳಸದಿದ್ದರೆ ಮತ್ತು ಮುನ್ನೆಚ್ಚರಿಕೆ ತೆಗೆದುಕೊಳ್ಳದಿದ್ದರೆ ಇದು ಕಣ್ಣಿನ ಗಂಭೀರ ಗಾಯಗಳಿಗೆ ಕಾರಣವಾಗಬಹುದು. ಪಟಾಕಿ ಹಚ್ಚುವ ಸಮಯದಲ್ಲಿ ಹೊರಹರಿವು, ಹೊಗೆ, ಉಷ್ಣತೆ ಮತ್ತು ಸಣ್ಣ ಕಣಗಳು ನಮ್ಮ ಕಣ್ಣುಗಳಿಗೆ ಅಪಾಯ ಉಂಟುಮಾಡುತ್ತವೆ. ಕಣ್ಣಿನ ಗಾಯಗಳು ಕೇವಲ ತಾತ್ಕಾಲಿಕ ತೊಂದರೆಗಿಂತಲೂ ಹೆಚ್ಚು, ಗಂಭೀರ ಪೀಡನೆಯಾಗಬಹುದು.



**ಪಟಾಕಿಗಳಿಂದ ಉಂಟಾಗಬಹುದಾದ ಸಾಮಾನ್ಯ ಕಣ್ಣಿನ ಗಾಯಗಳು**

**ರಾಸಾಯನಿಕ ಗಾಯಗಳು:** ಪಟಾಕಿಗಳಲ್ಲಿ ಬಳಸುವ ಸ್ಫೋಟಕ ಹಾಗೂ ಬಣ್ಣದ ರಸಾಯನಿಕಗಳು ಕಣ್ಣುಗಳಿಗೆ ಹಾನಿ ಉಂಟುಮಾಡುತ್ತವೆ. ಈ ರಾಸಾಯನಿಕಗಳು ಕಣ್ಣಿನ ಮೇಲ್ಮೈ ಹಾಗೂ ಒಳಗಿನ ಭಾಗಕ್ಕೆ ತೊಂದರೆ ನೀಡುತ್ತವೆ, ಇದು ಕಣ್ಣಿನ ದೃಷ್ಟಿಯನ್ನು ವಿಪರೀತವಾಗಿ ಕಡಿಮೆ ಮಾಡುತ್ತದೆ.

**ಸ್ಫೋಟದ ಉಷ್ಣತೆಯಿಂದಾಗುವ ತೊಂದರೆಗಳು** : ಪಟಾಕಿಗಳ ಸ್ಫೋಟದಿಂದ ಹೊರಬರುವ ಉಷ್ಣ ಕಣ್ಣಿನ ಚರ್ಮ ಹಾಗೂ ನೇರವಾಗಿ ಕಣ್ಣಿನ ಮೇಲೆ ಹೊತ್ತಿಕೊಂಡಾಗ ಗಂಭೀರ ಗಾಯಗಳು ಉಂಟಾಗುತ್ತವೆ. ಇದರಿಂದ ಕಣ್ಣು ಅಥವಾ ಚರ್ಮ ಸುಟ್ಟುಹೋಗುತ್ತದೆ.

**ಮೆಕ್ಯಾನಿಕಲ್/ ಭೌತಿಕ ಗಾಯಗಳು:** ಪಟಾಕಿಗಳ ಸ್ಫೋಟದಿಂದ ಉಂಟಾಗುವ ಶಾಖ ಮತ್ತು ಹೊಗೆ ಕೆಲವೊಮ್ಮೆ ಧೂಳು, ಸಣ್ಣ ಕಣಗಳು ಹಾಗೂ ದೊಡ್ಡ ಚೂರುಗಳು ಕಣ್ಣುಗಳಿಗೆ ತಿವಿಯುತ್ತದೆ. ಇದು ಕಣ್ಣಿನ ರೆಪ್ಪೆ ಹಾಗೂ ಕಣ್ಣಿನ ಒಳ ಭಾಗಗಳಿಗೆ ತೀವ್ರ ತೊಂದರೆ ಉಂಟುಮಾಡಬಹುದು.

**ಅಂಧತ್ವದ ಅಪಾಯ:** ಗಂಭೀರ ಕಣ್ಣು ಗಾಯಗಳು, ವಿಶೇಷವಾಗಿ ನೇರ ಪಟಾಕಿ ತಿವಿಕೆಗಳಿಂದ ಅಂಧತ್ವ ಉಂಟಾಗುವ ಅಪಾಯವಿದೆ. ಇದು ತಾತ್ಕಾಲಿಕ ಅಥವಾ ಶಾಶ್ವತವಾಗಿರಬಹುದು. ಇದನ್ನು ತಡೆಹಿಡಿಯುವುದು ಅತ್ಯಗತ್ಯ.

**ಪಟಾಕಿಗಳ ಸುರಕ್ಷತಾ ಕ್ರಮಗಳು**

**ಮಕ್ಕಳನ್ನು ಅತೀ ಹತ್ತಿರದಲ್ಲಿಡಬೇಡಿ:** ಪಟಾಕಿಗಳನ್ನು ಹಚ್ಚುವಾಗ ವಿಶೇಷವಾಗಿ ಮಕ್ಕಳು ಹತ್ತಿರದಲ್ಲಿ ಇರುವುದನ್ನು ತಪ್ಪಿಸಿ. ದೊಡ್ಡವರ ಮೇಲ್ವಿಚಾರಣೆಯಲ್ಲಿಯೇ ಮಕ್ಕಳು ಪಟಾಕಿ ಹಚ್ಚಲು ಅನುಮತಿಸಿ.

**ಕಣ್ಣಿನ ರಕ್ಷಣೆ:** ಪಟಾಕಿಗಳನ್ನು ಹಚ್ಚುವಾಗ ಪಾರದರ್ಶಕ ಗಾಗಲ್ಸ್ ಧರಿಸುವುದು ಉತ್ತಮ. ಇದು ಕಣ್ಣಿಗೆ ನೇರ ಹತ್ತಿಕೊಳ್ಳುವ ಕಣಗಳು ಅಥವಾ ಕಿಡಿಗಳಿಂದ ರಕ್ಷಣೆ ನೀಡುತ್ತದೆ.

**ಪಟಾಕಿ ಹಚ್ಚುವ ಸ್ಥಳ:** ಗಾಳಿ ತೀವ್ರವಾಗಿ ಬೀಸುವ ಸ್ಥಳದಲ್ಲಿ ಅಥವಾ ಮುಚ್ಚಿದ ಸ್ಥಳದಲ್ಲಿ ಪಟಾಕಿ ಹಚ್ಚಬೇಡಿ. ಪಟಾಕಿಗಳನ್ನು ಮುಕ್ತ ಹಾಗೂ ಸುರಕ್ಷಿತ ಸ್ಥಳದಲ್ಲಿ ಮಾತ್ರ ಹಚ್ಚಿ.

**ಗಾಢವಾದ ಬಟ್ಟೆ:** ಪಟಾಕಿ ಹಚ್ಚುವಾಗ ಸುಲಭವಾಗಿ ಬೆಂಕಿ ಹಿಡಿಯದ ಬಟ್ಟೆ ಧರಿಸಿ. ಇವು ಉಷ್ಣ ಹಾಗೂ ಬೆಂಕಿಯಿಂದ ರಕ್ಷಿಸಬಹುದು. ಹತ್ತಿಯಿಂದ ಮಾಡಿದ ಬಟ್ಟೆಯನ್ನು ಧರಿಸುವುದು ಉತ್ತಮ.

**ತಕ್ಷಣ ಚಿಕಿತ್ಸೆ:** ಕಣ್ಣಿಗೆ ಪಟಾಕಿಯಿಂದ ಗಾಯವಾದರೆ ತಕ್ಷಣವೇ ತಣ್ಣನೆಯ ನೀರಿನಿಂದ ತೊಳೆಯಿರಿ ಮತ್ತು ಕಣ್ಣಿನ ವೈದ್ಯರನ್ನು ಸಂಪರ್ಕಿಸಿ. ಪಟಾಕಿ ಹಚ್ಚಿದ ನಂತರ ಕೈ ಚೆನ್ನಾಗಿ ಸೋಪು ಮತ್ತು ನೀರಿನಿಂದ ತೊಳೆಯದೇ ಕಣ್ಣನ್ನು ಮುಟ್ಟಿಕೊಳ್ಳಬೇಡಿ.

**ಮಾರ್ಗದರ್ಶನ:** ಪಟಾಕಿ ಸುರಕ್ಷತಾ ಹಾಗೂ ಎಚ್ಚರಿಕೆ ಕ್ರಮಗಳನ್ನು ಅನುಸರಿಸಿದರೆ ಪಟಾಕಿಗಳಿಂದ ಆಗುವ ಕಣ್ಣಿನ ಗಾಯಗಳ ಸಾಧ್ಯತೆಯನ್ನು ಕಡಿಮೆ ಮಾಡಬಹುದು.



**- ಡಾ. ಜಿ.ಯು. ಅಭಿಷೇಕ್,**
ನೇತ್ರ ತಜ್ಞರು,
ಐ ಕೇರ್ ಸೆಂಟರ್,
ದಾವಣಗೆರೆ.

# 69 ಗಣ್ಯರು, ಸಂಸ್ಥೆಗಳಿಗೆ ರಾಜ್ಯೋತ್ಸವ ಪ್ರಶಸ್ತಿ

**ಮಾಜಿ ಸಿಎಂ ಮೊಯ್ಲಿ, ಶಿಲ್ಪಿ ಅರುಣ್ ಯೋಗಿರಾಜ್‌ಗೆ ಸಂದ ಗೌರವ**

ಬೆಂಗಳೂರು, ಅ. 30 - ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ವಿ.ರಂಗನಾಥ್, ಅಯೋಧ್ಯೆ ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್, ಡಾ. ಮೈಸೂರು ಸತ್ಯನಾರಾಯಣ ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ 69 ಗಣ್ಯರು ಮತ್ತು ಸಂಸ್ಥೆಗಳು ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನವೆಂಬರ್ 1ರಂದು ಸಂಜೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿನಡೆಯುವಸಮಾರಂಭದಲ್ಲಿಪ್ರಶಸ್ತಿಪುರಸ್ಕೃತರನ್ನುಸನ್ಮಾನಿಸಲಾಗುವುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ಚಿನ್ನದ ಪದಕ ಸೇರಿದಂತೆ ಐದು ಲಕ್ಷ ರೂ. ಗೌರವದೊಂದಿಗೆ ಸನ್ಮಾನಿಸಲಿದ್ದಾರೆ.

ಜಾನಪದ, ಚಲನಚಿತ್ರ, ಸಂಗೀತ, ನೃತ್ಯ, ಆಡಳಿತ, ವೈದ್ಯಕೀಯ, ಸಮಾಜ ಸೇವೆ, ಹೊರದೇಶ, ಹೊರನಾಡು, ಕೃಷಿ, ಪರಿಸರ, ತಂತ್ರಜ್ಞಾನ, ಮಾಧ್ಯಮ, ಸಹಕಾರ, ಯಕ್ಷಗಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದವರ ಪಟ್ಟಿ ಈ ಕೆಳಕಂಡಂತಿದೆ:

- ✦ **ಜಾನಪದ ಕ್ಷೇತ್ರ :** ಇಮಾಮಸಾಬ ಎಂ. ವಲ್ಲೆಪನವರ, ಅಶ್ವರಾಮಣ್ಣ, ಕುಮಾರಯ್ಯ, ವೀರಭದ್ರಯ್ಯ, ನರಸಿಂಹಲು (ಅಂಧ ಕಲಾವಿದ), ಬಸವರಾಜ ಸಂಗಪ್ಪ ಹಾರಿವಾಳ, ಎಸ್.ಜಿ. ಲಕ್ಷ್ಮೀದೇವಮ್ಮ, ಪಿಚ್ಚಳ್ಳಿ ಶ್ರೀನಿವಾಸ, ಲೋಕಯ್ಯ ಶೇರ (ಭೂತಾರಾಧನೆ).
- ✦ **ಚಲನಚಿತ್ರ-ಕಿರುತೆರೆ :** ಹೇಮಾ ಚೌಧರಿ, ಎಂ.ಎಸ್ ನರಸಿಂಹಮೂರ್ತಿ.
- ✦ **ಸಂಗೀತ ಕ್ಷೇತ್ರ :** ಪಿ ರಾಜಗೋಪಾಲ, ಎ.ಎನ್. ಸದಾಶಿವಪ್ಪ.
- ✦ **ನೃತ್ಯ :** ವಿದುಷಿ ಲಲಿತಾ ರಾವ್.
- ✦ **ಆಡಳಿತ ಕ್ಷೇತ್ರ :** ಎಸ್.ವಿ. ರಂಗನಾಥ್ (ನಿವೃತ್ತ ಮುಖ್ಯ ಕಾರ್ಯದರ್ಶಿ).
- ✦ **ವೈದ್ಯಕೀಯ ಕ್ಷೇತ್ರ :** ಡಾ. ಜೆ.ಬಿ. ಬಿಡನಹಾಳ, ಡಾ. ಮೈಸೂರು ಸತ್ಯಾನಾರಾಯಣ, ಡಾ.ಲಕ್ಷ್ಮಣ ಹನುಮಂತಪ್ಪ ಬಿದರಿ.
- ✦ **ಸಮಾಜ ಸೇವೆ :** ವೀರಸಂಗಯ್ಯ, ಹೀರಾಚಂದ್ ವಾಗ್ಮರೆ, ಮಲ್ಲಮ್ಮ ಸೂಲಗಿತ್ತಿ, ದಿಲೀಪ್ ಕುಮಾರ್.
- ✦ **ಸಂಕೀರ್ಣ ಕ್ಷೇತ್ರ :** ಹುಲಿಕಲ್ ನಟರಾಜ್, ಹೆಚ್.ಆರ್.ಸ್ವಾಮಿ, ಪ್ರಹ್ಲಾದ ರಾವ್, ಕೆ.ಅಜಿತ್ ಕುಮಾರ್ ರೈ, ಇರ್ಫಾನ್ ರಜಾಕ್, ವಿರೂಪಾಕ್ಷಪ್ಪ ರಾಮಚಂದ್ರಪ್ಪ ಹಾವನೂರು.
- ✦ **ಹೊರದೇಶ-ಹೊರನಾಡು:** ಕನ್ನಯ್ಯ ನಾಯ್ಡು, ಡಾ. ತುಂಬೆ ಮೊಹಿಯುದ್ದೀನ್, ಚಂದ್ರಶೇಖರ್ ನಾಯಕ್ ಪರಿಸರ: ಆಲ್ಮಿತ್ರಾ ಪಟೇಲ್.
- ✦ **ಕೃಷಿ:** ಶಿವನಾಪುರ ರಮೇಶ, ಪುಟ್ಟೀರಮ್ಮ.
- ✦ **ಮಾಧ್ಯಮ:** ಎನ್.ಎಸ್.ಶಂಕರ್, ಸನತ್ ಕುಮಾರ್ ಬೆಳಗಲಿ, ಎ.ಜಿ.ಕಾರಟಗಿ, ರಾಮಕೃಷ್ಣ ಬಡಶೇಶಿ.
- ✦ **ಶಿಲ್ಪಕಲೆ ಕ್ಷೇತ್ರ :** ಶಿಲ್ಪಿ ಅರುಣ್ ಯೋಗಿರಾಜ್ (ಅಯೋಧ್ಯೆ ಬಾಲರಾಮನ ಶಿಲ್ಪಿ).
- ✦ **ವಿಜ್ಞಾನ-ತಂತ್ರಜ್ಞಾನ :** ಪ್ರೊ. ಟಿ.ವಿ. ರಾಮಚಂದ್ರ, ಸುಬ್ಬಯ್ಯ ಅರುಣನ್.
- ✦ **ಸಹಕಾರ:** ವಿರೂಪಾಕ್ಷಪ್ಪ ನೇಕಾರ
- ✦ **ಬಯಲಾಟ:** ಸಿದ್ದಪ್ಪ ಕರಿಯಪ್ಪ(ಅಂಧ ಕಲಾವಿದ), ನಾರಾಯಣಪ್ಪ ಶಿಳ್ಳೇಕ್ಯಾತ.
- ✦ **ಯಕ್ಷಗಾನ:** ಕೇಶವ್ ಹೆಗಡೆ, ಸೀತಾರಾಮ ತೋಳ್ಪಾಡಿ
- ✦ **ರಂಗಭೂಮಿ:** ಸರಸ್ವತಿ ಜುಲೈಕ ಬೇಗಂ, ಓಬಳೇಶ್ ಹೆಚ್.ಬಿ., ಭಾಗ್ಯಶ್ರೀ ರವಿ, ಡಿ. ರಾಮು, ಜನಾರ್ದನ್ ಹೆಚ್., ಹನುಮಾನದಾಸ ವ. ಪವಾರ.
- ✦ **ಸಾಹಿತ್ಯ:** ಬಿ.ಟಿ. ಲಲಿತಾ ನಾಯಕ್, ಅಲ್ಲಮಪ್ರಭು ಬೆಟ್ಟದೂರು, ಡಾ.ಎಂ.ವೀರಪ್ಪ ಮೊಯ್ಲಿ, ಹನುಮಂತರಾವ್ ದೊಡ್ಡಮನಿ, ಡಾ.ಬಾಳಾಸಾಹೇಬ್ ಲೋಕಾಪುರ, ಬೈರಮಂಗಲ ರಾಮೇಗೌಡ. ಡಾ. ಪ್ರಶಾಂತ್ ಮಾಡ್ತಾ.
- ✦ **ಶಿಕ್ಷಣ:** ಡಾ.ವಿ.ಕಮಲಮ್ಮ, ಡಾ. ರಾಜೇಂದ್ರ ಶೆಟ್ಟಿ., ಡಾ. ಪದ್ಮಾಶೇಖರ್.
- ✦ **ಕ್ರೀಡೆ :** ಜೂಡ್ ಫೆಲಿಕ್ಸ್ ಸೆಬಾಸ್ಟಿಯನ್, ಗೌತಮ್ ವರ್ಮ, ಆರ್. ಉಮಾದೇವಿ.
- ✦ **ನ್ಯಾಯಾಂಗ:** ಬಾಲನ್. ✦ **ಚಿತ್ರಕಲೆ:** ಪ್ರಭು ಹರಸೂರು.
- ✦ **ಕರಕುಶಲ:** ಚಂದ್ರಶೇಖರ ಸಿರಿವಂತೆ.

# ರಾಣೇಬೆನ್ನೂರು ರೋಟರಿಗೆ ಪ್ರಶಸ್ತಿಗಳು

ರಾಣೇಬೆನ್ನೂರು, ಅ. 30 - ಇಲ್ಲಿನ ರೋಟರಿ ಕ್ಲಬ್ 2023-24ನೇ ಸಾಲಿನ ಕ್ಲಬ್ ಹಾಗೂ ವೈಯಕ್ತಿಕ ಪ್ರಶಸ್ತಿಗಳನ್ನ ಪಡೆದಿದ್ದು ನಿನ್ನೆ ಕೊಲ್ಲಾಪುರದಲ್ಲಿ ನಡೆದ ಸಮಾರಂಭದಲ್ಲಿ 3170 ರ ಜಿಲ್ಲಾ ರಾಜ್ಯಪಾಲ ನಾಸಿರ್ ಸಾಬ್ ಬೋರ್ಸೋಡೋವಾಲ್ ಅವರು ಕ್ಲಬ್ ಅಧ್ಯಕ್ಷ ಸುಜೀತ್ ಜಂಬಗಿ ಅವರಿಗೆ ನೀಡಿ ಗೌರವಿಸಿದರು.

ಸುಜೀತ್ ಜೊತೆಗೆ ಸಹಾಯಕ ರಾಜ್ಯಪಾಲ ಮಾಲತೇಶ ಅರಳಿಮಟ್ಟಿ, ಇಲ್ಲಿನ ಕಾರ್ಯದರ್ಶಿ ಪುಟ್ಟರಾಜಾ ಅಂಗಡಿ, ಜಿಲ್ಲಾ ಕಾರ್ಯದರ್ಶಿಗಳಾದ ಸಂಜು ಮತ್ತು ವಾಸುಕಿ ಮತ್ತು ಕ್ಲಬ್‌ನ ಇತರ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.



# ಕೆರೆಗಳ ಸಂಖ್ಯೆ ಹೆಚ್ಚಿಸುವಂತೆ ಸಚಿವರಿಗೆ ಮನವಿ

ದಾವಣಗೆರೆ, ಅ.30- ಜಿಲ್ಲೆಯಲ್ಲಿ ಕೆರೆಗಳು ಅಲ್ಪ ಪ್ರಮಾಣದಲ್ಲಿವೆ. ಹಾಗಾಗಿ ಅವುಗಳ ಸಂಖ್ಯೆ ಹೆಚ್ಚಿಸುವಂತೆ ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೆ ನೆಲ-ಜಲ ಹಾಗೂ ಪರಿಸರ ಸಂರಕ್ಷಣಾ ಆಂದೋಲನಾ ಸಮಿತಿ ಒಕ್ಕೂಟ ಮನವಿ ಸಲ್ಲಿಸಿದೆ.

ಜಿಲ್ಲೆಯಲ್ಲಿ ನೀರನ್ನು ಕ್ರೋಢೀಕರಿಸಲು ಕೇವಲ 527 ಕೆರೆಗಳಿವೆ. ಹಾಗಾಗಿಯೇ ಜಿಲ್ಲೆಯ ಜನ ಬೇಸಿಗೆಯಲ್ಲಿ ನೀರಿನ ತೊಂದರೆ ಅನುಭವಿಸುತ್ತಿದ್ದಾರೆ. ಈ ಸಮಸ್ಯೆ ತಪ್ಪಿಸಲು ಕೆರೆಗಳ ಸಂಖ್ಯೆ ದ್ವಿಗುಣಗೊಳಿಸುವ ಜತೆಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಪ್ರತ್ಯೇಕ ಅನುದಾನ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಜಿಲ್ಲೆಗೆ 1 ಸಾವಿರಕ್ಕೂ ಅಧಿಕ ಕೆರೆಗಳ ಅವಶ್ಯವಿದೆ. ಆದ್ದರಿಂದ ಹೊಸ ಕೆರೆಗಳನ್ನು ನಿರ್ಮಿಸಲು ಮುಂದಾಗಬೇಕು ಮತ್ತು ಇರುವ ಕೆರೆಗಳ ಹೂಳು ತೆಗೆಸಲು ಮುಂದಾಗಬೇಕು ಎಂದಿದ್ದಾರೆ.

ಹೊಸ ಕೆರೆಗಳ ನಿರ್ಮಾಣಕ್ಕೆ ಸರ್ಕಾರಿ ಜಾಗಗಳನ್ನು ಗುರುತಿಸಿ, ಅವುಗಳ ನಿರ್ಮಾಣಕ್ಕೆ ಸುಮಾರು 500 ಕೋಟಿ ಹಣ ಮೀಸಲಿಡಬೇಕೆಂದಿದ್ದಾರೆ.

ಹರಿಹರ ತಾಲ್ಲೂಕು, ಭೈರನಪಾದ ಬ್ಯಾರೇಜನ್ನು 600 ರಿಂದ 700 ಅಡಿ ಅಗಲ, 15 ಅಡಿ ಎತ್ತರ, 3 ಕಿ.ಮೀ ಉದ್ದದಲ್ಲಿ ಯಾವುದೇ ಭೂಸ್ವಾಧೀನವಿಲ್ಲದೆ ನಿರ್ಮಿಸಿದರೇ ಸುಮಾರು 17 ಟಿ.ಎಂ.ಸಿ. ನೀರನ್ನು ಶೇಖರಿಸಬಹುದು. ಇದರಿಂದ ಬೇಸಿಗೆಯಲ್ಲಿ ನೀರಿನ ಬವಣೆಯನ್ನೂ ತಪ್ಪಿಸಬಹುದಾಗಿದೆ.

# ಜಾತಿ ಜನಗಣತಿ ವರದಿ ಬಹಿರಂಗಕ್ಕೆ ಪೀಪಲ್ ಲಾಯರ್ಸ್ ಗಿಲ್ಡ್ ಆಗ್ರಹ

ದಾವಣಗೆರೆ, ಅ.30- ಜಾತಿ ಜನಗಣತಿ ವರದಿಯನ್ನು ಸರ್ಕಾರ ಸಂಪುಟದಲ್ಲಿ ಒಪ್ಪಿಗೆ ಪಡೆದು ಬಹಿರಂಗಪಡಿಸದಿದ್ದಲ್ಲಿ ಲಾಯರ್ಸ್ ಗಿಲ್ಡ್ ವತಿಯಿಂದ ಉಚ್ಚ ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮಾಡಲಾಗುವುದು ಎಂದು ಗಿಲ್ಡ್ ರಾಜ್ಯ ಸಂಚಾಲಯ ಅನೀಸ್ ಪಾಷ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರ ಜಾತಿ ಜನಗಣತಿ ವರದಿ ಸಿದ್ಧಪಡಿಸಲು ಸಾರ್ವಜನಿಕರ 169 ಕೋಟಿ ರೂ.ಗಳನ್ನು ವ್ಯಯ ಮಾಡಿತ್ತು. ಹೆಚ್.ಕಾಂತರಾಜ್ ಆಯೋಗದ ವರದಿಯನ್ನು ಮುಖ್ಯಸ್ಥರಾದ ಜಯಪ್ರಕಾಶ್ ಹೆಗಡೆಯವರು ವರದಿಯನ್ನು ಫೆಬ್ರವರಿ ತಿಂಗಳಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸರ್ಕಾರ ಈ ವರದಿಯನ್ನು ಕೂಡಲೇ ಅಂಗೀಕರಿಸಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಜಾತಿ ಜನಗಣತಿ ವರದಿಯನ್ನು ಸಿದ್ಧಪಡಿಸಲು ಸರ್ಕಾರ ನೀಡಿದ ನಿರ್ದೇಶನದಂತೆ ವಿವರವಾದ ವರದಿಯನ್ನು ಮಂಡಿಸಿರುತ್ತಾರೆ. ಕೆಲವು ಸಮುದಾಯದವರು ಈ ವರದಿ ಅವೈಜ್ಞಾನಿಕವಾಗಿದೆ. ದುರುದ್ದೇಶದ ಸಮಾಜವನ್ನು ಒಡೆಯುವ ಸಮೀಕ್ಷೆ. ಅದನ್ನು ಅಂಗೀಕರಿಸಬಾರದು ಎಂದು ಸರ್ಕಾರಕ್ಕೆ ಒತ್ತಡ ಹಾಕುತ್ತಿದ್ದಾರೆ. ಕೆಲವು ಮಠಾಧೀಶರೂ ಸಹ ಜಾತಿ ಜನಗಣತಿ ಬೇಡ ಎಂದು ಹೇಳುತ್ತಿದ್ದಾರೆ. ಈ ರೀತಿ ಸರ್ಕಾರಕ್ಕೆ ಒತ್ತಡ ಹಾಕುವುದು ನ್ಯಾಯಸಮ್ಮತವಲ್ಲ ಎಂದರು.

ಸರ್ಕಾರ 15 ದಿನಗಳೊಳಗಾಗಿ ಜಯಪ್ರಕಾಶ್ ಹೆಗಡೆ ಮಂಡಿಸಿರುವ ವರದಿಯನ್ನು ಅಂಗೀಕರಿಸಿ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರುದ್ರೇಶ್, ಜಸ್ಟಿನ್ ಜಯಕುಮಾರ್, ಪ್ರದೀಪ್ ಲೋಕಿಕೆರೆ, ಹನೀಫ್ ಸಾಬ್, ಅಂಜಿನಪ್ಪ, ನಾಗರಾಜ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಕನ್ನಡ ಬಾವುಟ ವಿತರಣೆ

ನವೆಂಬರ್ 1 ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಉಚಿತವಾಗಿ ಕನ್ನಡ ಬಾವುಟಗಳನ್ನು ನಗರದ 11ನೇ ಮೇನ್ 3ನೇ ಕ್ರಾಸ್‌ನ ಎಂ.ಸಿ.ಸಿ 'ಬಿ' ಬ್ಲಾಕ್‌ನಲ್ಲಿರುವ ಸುರೇಶ್ ಕಾಫಿ ಬಾರ್‌ನಲ್ಲಿ ಇಂದು ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಒಬ್ಬರಿಗೆ ಒಂದು ಬಾವುಟ ವಿತರಿಸಲಾಗುವುದು.

ಶಾಲಾ - ಕಾಲೇಜಿನಿಂದ ಬರುವವರು ಮುಖ್ಯೋಪಾಧ್ಯಾಯರಿಂದ ಮನವಿ ಪತ್ರ ತರಬೇಕು. ವಿವರಕ್ಕೆ ಸಂಪರ್ಕಿಸಿ : 98862-95344.


## PUBLIC NOTICE

My client Sri Manjappa s/o A.K. Hanumanthappa resident at alur village Davangere Taluk issued this public Notice as under.

My client got the agricultural land bearing Re sy No. 33/*measuring 2 acre 21 Guntas under Govt. grant situated at alur village, Anagodu Hobli Davangere Tq. Thasildar Davangere issued the grant certificate form No-1 on 13.03.1985. My client laminated the original grant certificate form No.1

Now Sri Manjappa S/o A.K. Hanumanthappa is intended to avail the mortgage loan in SBI, ADB Branch Davangere by deposit the laminated original Grant Certificate. If any objection to this contact my client or advocate of SBI Bank, ADB Branch Davangere.

**Signature of client**
**Sd/- Manjappa**
**9880592267**
**Date : 29.10.2024**

**Sd/- (Gopala M.) Advocate**
#1049/11, 2nd main, 5th cross, Shivakumara swamy Badavane, 1st stage, DVG. M : 9448233500

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ದಾವಣಗೆರೆ ವಿಭಾಗ: ದಾವಣಗೆರೆ – 577002.

ಸಂ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/2176/2024–25 ದಿನಾಂಕ: 30.10.2024

**ಇ–ಟೆಂಡರ್ ಪ್ರಕಟಣೆ ಸಂ:09/2024–25**

(**ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದ ಹೊರ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ**) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, **ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ದಾವಣಗೆರೆ** ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಹೋರ್ಡಿಂಗ್ಸ್ ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರ ಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: "**https://kppp.karnataka.gov.in**" ಹಾಗೂ ನಿಗಮದ ವೆಬ್‌ಸೈಟ್: **ksrtc.karnataka.gov.in** ನಲ್ಲಿ ದಿನಾಂಕ:30.10.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ ನಿಗಮ, ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ ದಾವಣಗೆರೆ ವಿಭಾಗ.

ವಾಸಾಸಂಇ/ವಾಪ್ರ/ಜಿಎ/2846/2024–25

## ಪುರಸಭಾ ಕಾರ್ಯಾಲಯ, ಮಲೇಬೆನ್ನೂರು, (ದಾವಣಗೆರೆ ಜಿಲ್ಲೆ)

Phone: 08192-268858 Email: ka.malebennuru.tmc@gmail.com

ಕ್ರಮಾಂಕ/ಪುಸಮ/ತಾಂತ್ರಿಕ/ಸಿ.ಆರ್/06/2024–25 ದಿನಾಂಕ: 30–10–2024

**ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2023–24ನೇ ಸಾಲಿನ 15ನೇ ಹಣಕಾಸು, ಎಸ್ಎಫ್‌ಸಿ, ಎಸ್‌ಬಿಎಮ್ ಅನುದಾನದಡಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾವರದರ್ಶಕತೆ ಆದೇಶ–1999–2000ರ Act 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ಮತ್ತು 2ರ ನಿಯಮದನ್ವಯ ಈ ಕೆಳಗಿನಂತೆ ಇಂಡೆಂಟ್ ನಂಬರ್ ನೀಡಲಾದ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ದಾಖಲೆಗಳನ್ನು https://kppp.karnataka.gov.in/ ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿದೆ. .

(1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಬಗ್ಗೆ ವಿಚಾರಿಸಲು ಕೊನೆಯ ದಿನಾಂಕ: 08–11–2024 ರ ರಂದು ಸಾಯಂಕಾಲ 05–30 ಗಂಟೆಯವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13–11–2024 ರಂದು ಸಾಯಂಕಾಲ 05–30 ಗಂಟೆಯವರೆಗೆ (3) ಇ–ಪ್ರೊಕ್ಯೂರ್‌ಮೆಂಟ್ ತೆರೆಯುವ ದಿನಾಂಕ: 15–11–2024 ರಂದು ಬೆಳಿಗ್ಗೆ 11–00 ಗಂಟೆಗೆ ಅಥವಾ ನಿಗಧಿಪಡಿಸಿದ ದಿನಾಂಕದಂದು

(1) DMA/2024-25/OW/WORK_INDENT27139/CALL-2 TMC ಮಲೇಬೆನ್ನೂರು ನಲ್ಲಿ SWM ಸೈಟ್‌ಲ್ಲಿ 2120 SQFT 53X40 SQFT ಗಾಗಿ PEB ರಚನೆಯ ಪ್ರಾಥಮಿಕ ಶೆಡ್‌ನ ಪ್ರಸ್ತಾವಿತ 3 TPD ಮೆಟೀರಿಯಲ್ ರಿಕವರಿ ಸೌಲಭ್ಯದ ನಿರ್ಮಾಣ ಕಾಮಗಾರಿ (2) DMA/2024-25/OW/WORK_INDENT30097/CALL-2 ಕಚೇರಿ ಕೆಲಸಗಳಲ್ಲಿ TMC ಮಲೆಬೆನ್ನೂರು ಕಚೇರಿಯಲ್ಲಿ ಜನರೇಟರ್ ಖರೀದಿ. (3) DMA/2024-25/EL/WORK_INDENT28122/CALL-2 ವಿದ್ಯುತ್ ಕಾಮಗಾರಿಗಳ ಅಂದಾಜು (ಟ್ರಾನ್ಸ್‌ಫಾರ್ಮರ್–100 KvA ಅಳವಡಿಕೆ) ಮತ್ತು ಬೀದಿ ದೀಪ ಕಾಮಗಾರಿ (4) DMA/2024-25/OW/WORK_INDENT27961/CALL-2 ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಮಾನು ನಿರ್ಮಾಣ ಕಾಮಗಾರಿ. (5) DMA/2024-25/OW/WORK_INDENT30278/CALL-2 ವಾರ್ಡ್ ನಂ 23 ರಲ್ಲಿ ಆಶ್ರಯ ಲೇಔಟ್ ನಿರ್ಮಿಸಿದ ಪಾರ್ಕ್ ಮಕ್ಕಳ ಆಟಿಕೆಗಳು ಮತ್ತು ಪಾರ್ಕ್ ಬೋರಡ್ ಅಳವಡಿಕೆ ಕಾಮಗಾರಿ (6) DMA/2024-25/OW/WORK_INDENT30277/CALL-2 ವಾರ್ಡ್ ನಂ 23 ರಲ್ಲಿ ಆಶ್ರಯ ಲೇಔಟ್ ನಿರ್ಮಿಸಿದ ಪಾರ್ಕ್ ಮಕ್ಕಳ ಆಟಿಕೆಗಳು ಮತ್ತು ಪಾರ್ಕ್ ಬೋರಡ್ ಅಳವಡಿಕೆ ಕಾಮಗಾರಿ. (7) DMA/2024-25/OW/WORK_INDENT30061/CALL-2 ವಾರ್ಡ್ ನಂ 11 ಭೋವಿ ಕಾಲೋನಿ ಅಗತ್ಯವಿರುವಂತೆ ಅಭಿವೃದ್ಧಿ ನಿರ್ಮಾಣ ಕಾಮಗಾರಿ. (8) DMA/2024-25/OW/WORK_INDENT28224/CALL-2 ಟಾಯ್ಲೆಟ್ ಬ್ಲಾಕ್, ಸೆಪ್ಟಿಕ್ ಟ್ಯಾಂಕ್, ಸೋಕ್ ಪಿಟ್ ಜೊತೆಗೆ ವಿದ್ಯುತ್ ಕೆಲಸವಿರುವ ಆಫೀಸ್ ಕಮ್ ಸೆಕ್ಯುರಿಟಿ ರೂಮ್ ನಿರ್ಮಾಣ ಕಾಮಗಾರಿ. (9) DMA/2024-25/OW/WORK_INDENT28145/CALL-2 (ST Reserved Category Work) ಸೈಂಟಿಫಿಕ್ ಸ್ಯಾನಿಟರಿ ಲ್ಯಾಂಡ್‌ಫಿಲ್ (SLF) ನಿರ್ಮಾಣ ಕಾಮಗಾರಿ. :: **ಷರತ್ತುಗಳು** :: 1. ಎಲ್ಲಾ ಟೆಂಡರ್‌ಗಳು ಸ್ಟ್ಯಾಂಡರ್ಡ್ ಕೆಡಬ್ಲ್ಯೂ – 1 & 2ಟೆಂಡರ್ ಡಾಕುಮೆಂಟ್ ಷರತ್ತಿಗೊಳಪಟ್ಟಿದೆ. 2. ಟೆಂಡರ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೆ ಅಂಗೀಕರಿಸುವ, ಅಥವಾ ರದ್ದುಪಡಿಸುವ ಅಧಿಕಾರವನ್ನು ಪುರಸಭೆ ಕಾಯ್ದಿರಿಸಿದೆ.

**ಸಹಿ/– ಅಧ್ಯಕ್ಷರು, ಪುರಸಭೆ, ಮಲೇಬೆನ್ನೂರು**
**ಸಹಿ/– ಮುಖ್ಯಾಧಿಕಾರಿ, ಪುರಸಭೆ, ಮಲೇಬೆನ್ನೂರು**

ವಾಸಾಇ/ದಾವಣಗೆರೆ/463/ಕೆಎಸ್ಎಂಸಿಎ/2024–25




KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ರಾಜಸ್ವ ಸಂಗ್ರಹಣೆಗಾಗಿ ಕ್ರಮಕ್ಕೆ ಸಿಎಂ ಸೂಚನೆ



ಬೆಂಗಳೂರು, ಅ.30- ಅರಣ್ಯ ಇಲಾಖೆಯೊಂದಿಗಿನ ಗೊಂದಲಗಳನ್ನು ನಿವಾರಿಸಿಕೊಂಡು ರಾಜಸ್ವ ಸಂಗ್ರಹಣೆಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಗಣಿ, ಭೂವಿಜ್ಞಾನ ಹಾಗೂ ಅರಣ್ಯ ಇಲಾಖೆ ಸಭೆಯಲ್ಲಿ ಈ ಸೂಚನೆ ನೀಡಿದರು.

ಗಣಿ ಇಲಾಖೆ ಪ್ರಗತಿ ಯು ಕಳೆದ ವರ್ಷ ಇದೇ ಅವಧಿಯಲ್ಲಿ ಶೇ. 54ರಷ್ಟು ಇತ್ತು . ಪ್ರಸಕ್ತ ಸಾಲಿನಲ್ಲಿ ಶೇ.46 ರಾಜಸ್ವ ಸಂಗ್ರಹಣೆ ಆಗಿದೆ. ಅರಣ್ಯ ಇಲಾಖೆಯೊಂದಿಗೆ ಇರುವ ಗೊಂದಲಗಳನ್ನು ನಿವಾರಿಸಿಕೊಂಡು ರಾಜಸ್ವ ಸಂಗ್ರಹಣೆಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ ಅಭಿವೃದ್ಧಿ ಹಿತಾಸಕ್ತಿಗೆ ಪ್ರಾಮುಖ್ಯತೆ ನೀಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ ಮುಖ್ಯಮಂತ್ರಿಗಳು, ರಾಜ್ಯದ ಹಿತಾಸಕ್ತಿಗೆ, ಅಭಿವೃದ್ಧಿಗೆ ಧಕ್ಕೆ ಮಾಡಿದರೆ ಸಹಿಸಲ್ಲ. ನಿಯಮ ಉಲ್ಲಂಘಿಸದೆ ಕ್ರಿಯಾಶೀಲತೆ ತೋರಿ ಎಂದು ಅರಣ್ಯ ಇಲಾಖೆ ಪಿಸಿಸಿಎಫ್ ಅವರಿಗೆ ಸಿಎಂ ಸೂಚನೆ ನೀಡಿದರು.

ಬೇರೆ ರಾಜ್ಯಗಳಲ್ಲಿ ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನ ಎಂದು ಪರಿಗಣಿಸಿರುವುದಿಲ್ಲ. ನಮ್ಮ ರಾಜ್ಯದಲ್ಲಿ ಇದೇ ಮಾದರಿ ಅಳವಡಿಸಿಕೊಳ್ಳಲು ಮುಂದಿನ ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ ತರುವಂತೆ ಸೂಚಿಸಿದರು.

ಸಭೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಎಲ್.ಅತೀಕ್, ವಾಣಿಜ್ಯ ಮತ್ತು ಗಣಿ ಇಲಾಖೆ ಕಾರ್ಯದರ್ಶಿ ವಿಪುಲ್ ಬನ್ಸಾಲ್, ಅರಣ್ಯ, ಜೀವಿ ಪರಿಸ್ಥಿತಿ ಅಪರ ಮುಖ್ಯ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಆಫ್ಘಾನ್ ಮಹಿಳೆಯರ ಪ್ರಾರ್ಥನೆ ಮೇಲೂ ನಿರ್ಬಂಧ

ಇಸ್ಲಾಮಾಬಾದ್, ಅ. 30 – ಆಫ್ಘಾನ್ ಮಹಿಳೆಯರು ಇತರೆ ಮಹಿಳೆಯರ ಎದುರು ಏರು ದನಿಯಲ್ಲಿ ಪ್ರಾರ್ಥಿಸುವಂತಿಲ್ಲ ಹಾಗೂ ಕುರಾನ್ ಪಠಣ ಮಾಡುವಂತಿಲ್ಲ ಎಂದು ನಿಷೇಧ ಹೇರಿರುವುದಾಗಿ ಅಲ್ಲಿನ ಸಚಿವರೊಬ್ಬರು ಹೇಳಿದ್ದಾರೆ.

ಮಹಿಳೆಯರ ಮೇಲೆ ತಾಲಿಬಾನ್ ಈಗಾಗಲೇ ಹಲವಾರು ನಿರ್ಬಂಧಗಳನ್ನು ಹೇರಿದೆ. ಮನೆಯಿಂದ ಹೊರಗೆ ಅವರ ಧ್ವನಿ ಕೇಳಿ ಬರುವಂತಿಲ್ಲ ಹಾಗೂ ಅವರು ಮುಖ ತೋರಿಸುವಂತಿಲ್ಲ ಎಂದು ಈಗಾಗಲೇ ನಿರ್ಬಂಧಿಸಲಾಗಿದೆ. ಆರನೇ ತರಗತಿ ನಂತರ ಅವರು ವ್ಯಾಸಂಗ ಮಾಡುವಂತಿಲ್ಲ. ಹಲವಾರು ಸಾರ್ವಜನಿಕ ಸ್ಥಳಗಳಲ್ಲಿ ಕಾಣಿಸಿಕೊಳ್ಳುವಂತಿಲ್ಲ ಮತ್ತು ಬಹುತೇಕ ಉದ್ಯೋಗಗಳಲ್ಲಿ ಪಾಲ್ಗೊಳ್ಳುವಂತಿಲ್ಲ.

ಆಫ್ಘಾನಿಸ್ತಾನದ ಸದ್ಗುಣ ಹಾಗೂ ದುರ್ಗುಣಗಳ ಸಚಿವಾಲಯವು ಈ ಎಲ್ಲ ನಿರ್ಬಂಧಗಳನ್ನು ನಿರ್ವಹಿಸುತ್ತಿದೆ. ಸಚಿವರ ಹೇಳಿಕೆಯ ಬಗ್ಗೆ ಸಚಿವಾಲಯವು ಸದ್ಯಕ್ಕೆ ಯಾವುದೇ ಹೇಳಿಕೆ ನೀಡಿಲ್ಲ.

ಪೂರ್ವ ಲೊಗರ್ ಪ್ರಾಂತ್ಯದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಮಾತನಾಡಿದ ಸದ್ಗುಣ ಹಾಗೂ ದುರ್ಗಣಗಳ ಸಚಿವಾಲಯದ ಸಚಿವ ಖಲಿದ್ ಹನಾಫಿ, ಹಿರಿಯ ಮಹಿಳೆಯರು ಇತರೆ ಮಹಿಳೆಯರ ಎದುರು ಪವಿತ್ರ ಕುರಾನ್ ಹೇಳುವಂತಿಲ್ಲ. ಅವರು ಅಲ್ಲಾಹು ಅಕ್ಬರ್ ಎಂದೂ ಹೇಳಲು ಅನುಮತಿ ಇಲ್ಲ ಎಂದಿದ್ದಾರೆ.

ಮಹಿಳೆಯರು ಇತರೆ ಮಹಿಳೆಯರ ಎದುರು ಪ್ರಾರ್ಥನೆ ಮಾಡುವಂತಿಲ್ಲ. ಹಾಡುವುದಕ್ಕಂತೂ ಅವಕಾಶವೇ ಇಲ್ಲ ಎಂದು ಸಚಿವರು ಹೇಳಿದ್ದಾರೆ. ಅವರ ಹೇಳಿಕೆಗಳನ್ನು ಸಚಿವಾಲಯದ ಸಾಮಾಜಿಕ ಮಾಧ್ಯಮ ಹೇಳಿಕೆಯಲ್ಲಿ ಪ್ರಕಟಿಸಲಾಗಿತ್ತು. ಆದರೆ, ನಂತರ ಡಿಲೀಟ್ ಮಾಡಲಾಗಿತ್ತು.

ಮಾಧ್ಯಮಗಳು ಸಜೀವಿಗಳ ಚಿತ್ರ ಪ್ರದರ್ಶಿಸಬಾರದು ಎಂದು ಆಫ್ಘಾನ್ ಪ್ರಾಂತ್ಯಗಳು ಈಗಾಗಲೇ ನಿರ್ಬಂಧ ಹೇರಿವೆ. ಮಹಿಳೆಯರು ಒಬ್ಬರೇ ಮನೆಯಿಂದ ಹೊರ ಬರುವಂತಿಲ್ಲ, ಅವರೊಂದಿಗೆ ಪುರುಷ ರಕ್ಷಕರು ಇರಲೇಬೇಕಿದೆ.

# ರೈತ, ಕಾರ್ಮಿಕ ವಿರೋಧಿ ಕಾಯ್ದೆಗಳ ಕೈ ಬಿಡಿ

## ನ.26ರಂದು ದೇಶಾದ್ಯಂತ ಜಿಲ್ಲಾ ಮಟ್ಟದಲ್ಲಿ ಸರ್ಕಾರಕ್ಕೆ ಮನವಿ: ಬಸವರಾಜಪ್ಪ



ದಾವಣಗೆರೆ, ಅ.30- ರೈತ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಯನ್ನು ಹಿಂಪಡೆಯಬೇಕೆಂದು ಆಗ್ರಹಿಸಿ ನ.26ರಂದು ದೇಶಾದ್ಯಂತ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ತಿಳಿಸಿದರು.

ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ವತಿಯಿಂದ ನಗರದ ಎಪಿಎಂಸಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜಿಲ್ಲಾ ಸಂಘಟನಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರವು ರೈತ ವಿರೋಧಿ ಕೃಷಿ ಕಾಯ್ದೆ ಹಿಂಪಡೆಯಬೇಕು ಮತ್ತು ವಿದ್ಯುಚ್ಛಕ್ತಿ ಖಾಸಗೀಕರಣ ಜಾರಿ ಮಾಡುವ ಯೋಚನೆ ಕೈ ಬಿಡಬೇಕು. ಇಲ್ಲದಿದ್ದರೇ ದೇಶಾದ್ಯಂತ ರಕ್ತಪಾತ ಆಗಲಿದೆ ಎಂದು ಎಚ್ಚರಿಕೆ ನೀಡಿದರು.

ವಿದ್ಯುಚ್ಛಕ್ತಿ ಖಾಸಗೀಕರಣ ರೈತರಿಗಷ್ಟೇ ಅಲ್ಲ, ದೇಶದ ಜನರಿಗೆ ಮರಣ ಶಾಸನ ಆಗಿದೆ. ಆದ್ದರಿಂದ ಎಲ್ಲರೂ ಒಗ್ಗಟ್ಟಾಗಿ ಧ್ವನಿ ಎತ್ತಬೇಕು. ಕಾಯ್ದೆ ಜಾರಿ ಹಿಂದೆ ಮೋದಿ ಸ್ನೇಹಿತರಿಗೆ ಅನುಕೂಲ ಮಾಡುವ ಹುನ್ನಾರ ನಡೆದಿದೆ ಎಂದು ಹೇಳಿದರು.

ಭೂ-ಸುಧಾರಣೆ ಮತ್ತು ಭೂ-ಸ್ವಾಧೀನ ಕಾಯ್ದೆ ರೈತ ವಿರೋಧಿಯಾಗಿದೆ. ಇಂತಹ ಕಾಯ್ದೆಯಿಂದ ಜಮೀನುಗಳು ರೈತರ ಕೈ ತಪ್ಪಿ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ತುತ್ತಾಗುತ್ತಿವೆ. ಆಹಾರ ಭದ್ರತೆಯ ದೃಷ್ಟಿಯಿಂದಾದರೂ ಭೂಮಿ ರೈತರ ಬಳಿ ಉಳಿಯಬೇಕು ಎಂದರು.

ಸರ್ಕಾರವು ಬಗರ್ ಹುಕ್ಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸದೇ ಅವರಿಗೆ ಹಕ್ಕು ಪತ್ರ ವಿತರಿಸಬೇಕು ಮತ್ತು ಮುಖ್ಯಮಂತ್ರಿಗಳು ರೈತರು ಮತ್ತು ಕಾರ್ಮಿಕರನ್ನು ಜನತಾ ಅಧಿವೇಶನ ಕರೆಯಬೇಕೆಂದು ಒತ್ತಾಯಿಸಿದರು.

ಕಾರ್ಮಿಕರ ಕೆಲಸದ ಅವಧಿ ಹೆಚ್ಚಿಸಿ ಕೇಂದ್ರ ಸರ್ಕಾರ ಕಾರ್ಮಿಕರ ಕಾಯ್ದೆಗಳನ್ನು ಬುಡಮೇಲು ಮಾಡಿದೆ. ರಾಜ್ಯ ಸರ್ಕಾರವೂ ಸಹ ಕಂಪನಿಗಳ ಪರ ಬ್ಯಾಟ್ ಬೀಸುತ್ತಿದೆ ಹಾಗಾಗಿ ಈ ಎರಡೂ ಸರ್ಕಾರಗಳ ವಿರುದ್ಧ ಹೋರಾಟ ಮಾಡಲಿದ್ದೇವೆ ಎಂದು ಹೇಳಿದರು.

ಹಿಂದೆ ರಾಜ್ಯದಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದಾಗ 3 ಕೃಷಿ ಕಾಯ್ದೆ ಜಾರಿಗೆ ತಂದಿದ್ದರು. ಈ ಕಾಯ್ದೆಯನ್ನು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ರದ್ದು ಪಡಿಸುವುದಾಗಿ ನೀಡಿದ ಭರವಸೆ ಹುಸಿಯಾಗಿದೆ. ಹಾಗಾಗಿ ರೈತ ಸಂಘಕ್ಕೆ ಸರ್ಕಾರ ಬದಲಿಸುವ ಶಕ್ತಿಯಿದೆ ಎಂದು ಕಿಡಿಕಾರಿದರು.

ಎಐಕೆಎಸ್ ಜಿಲ್ಲಾಧ್ಯಕ್ಷ ಆವರಗೆರೆ ಉಮೇಶ್ ಪ್ರಾಸ್ತಾವಿಕ ಮಾತನಾಡಿದರು. ಎಐಕೆಕೆಎಂಎಸ್ ಜಿಲ್ಲಾಧ್ಯಕ್ಷ ಮಧು ತೊಗಲೇರಿ ನಿರೂಪಿಸಿದರು.

ಈ ವೇಳೆ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ಹೊನ್ನೂರು ಮುನಿಯಪ್ಪ, ಗುಮ್ಮನೂರು ಬಸವರಾಜ್, ಕೆಪಿಆರ್‌ಎಸ್ ಜಿಲ್ಲಾ ಸಂಚಾಲಕ ಶ್ರೀನಿವಾಸ್, ಆನಂದರಾಜ್, ಆವರಗೆರೆ ಚಂದ್ರು, ಮಂಜುನಾಥ್ ಕೈದಾಳೆ, ಪವಿತ್ರ, ಕುರುವ ಗಣೇಶ್, ಅರುಣ್ ಕುಮಾರ್ ಕುರುಡಿ ಮತ್ತಿತರರಿದ್ದರು.

### ಹಕ್ಕೊತ್ತಾಯಗಳು..

* ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ಕೂಡಲೇ ಕೈಬಿಡಬೇಕು.
* ಕಾರ್ಮಿಕ ವಿರೋಧಿ ನಾಲ್ಕು ಕೋಡ್‌ಗಳನ್ನು ರದ್ದು ಪಡಿಸಬೇಕು.
* ಜಿಲ್ಲೆಯಲ್ಲಿ ನಿರಾವರಿ ಯೋಜನೆ ಸಮಗ್ರವಾಗಿ ಅನುಷ್ಠಾನ ಗೊಳಿಸಬೇಕು.
* ರೈತರ ಬೆಳೆ ಖರೀದಿಸಲು ಖರೀದಿ ಕೇಂದ್ರ ತೆರೆಯಬೇಕು.
* ರೈತರ ಪಂಪ್‌ಸೆಟ್‌ಗಳಿಗೆ ಆಧಾರ್ ಜೋಡಣೆ ನಿಯಮ ಕೈ ಬಿಡಬೇಕು.

### ಸಾಲಕ್ಕೆ ಆತ್ಮಹತ್ಯೆ ಬೇಡ..!

ರೈತರು ಸಾಲಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳಬಾರದು. ಸೊಸೈಟಿ ಹಾಗೂ ಬ್ಯಾಂಕಿನವರು ಸಾಲ ವಸೂಲಿಗೆ ಬಂದಾಗ ಅವರನ್ನೇ ಕಟ್ಟಿಹಾಕಿ. ನಿಮ್ಮ ಹಿಂದೆ ರೈತ ಸಂಘಟನೆ ಸದಾ ಇರಲಿದೆ ಎಂದು ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಹೇಳಿದರು.

# ನಗರಕ್ಕೆ ಅನುದಾನ: ಸಿಎಂ ಸಕಾರಾತ್ಮಕ ಸ್ಪಂದನೆ



ದಾವಣಗೆರೆ, ಅ.30- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರದ ಅಭಿವೃದ್ಧಿಗಾಗಿ ಕೆಲವು ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ತಿಳಿಸಿದರು.

ಪಾಲಿಕೆಯ ಮೇಯರ್ ಕೊಠಡಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಭೆ ನಿಮಿತ್ತಾ ಬೆಂಗಳೂರಿಗೆ ಹೋದಾಗ ಮಂಗಳವಾರ ಶಕ್ತಿ ಭವನ ದಲ್ಲಿ ನಗರದ ಜ್ವಲಂತ ಸಮಸ್ಯೆ ಹಾಗೂ ಅಭಿವೃದ್ಧಿ ಗಾಗಿ 8 ಅಂಶಗಳ ಪ್ರಸ್ತಾವನೆ ಯನ್ನು ಚರ್ಚಿಸಿದ್ದೇವು ಎಂದು ಹೇಳಿದರು.

ಪಾಲಿಕೆ ಸದಸ್ಯ ಎ. ನಾಗರಾಜ್ ಮಾತನಾಡಿ, ಇಲ್ಲಿನ ಶಾಸಕರಾದ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ನಗರದಲ್ಲಿ ಅಭಿವೃದ್ಧಿ ಪರ್ವವೇ ನಡೆಯುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಪಾಲಿಕೆಯಲ್ಲಿ ತೆರೆದ ನೂತನ ಹೆಲ್ಪ್ ಡೆಸ್ಕ್ ಅನ್ನು ಮೇಯರ್ ಚಮನ್ ಸಾಬ್ ಉದ್ಘಾಟಿಸಿದರು. ಈ ವೇಳೆ ಉಪ ಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಎ. ನಾಗರಾಜ್, ಕಾಂಗ್ರೆಸ್ ಮುಖಂಡ ಉಮೇಶ್ ಮತ್ತಿತರರಿದ್ದರು.


### ರುದ್ರಭೂಮಿಯಲ್ಲಿ ಇಂದು ಸ್ವಚ್ಛತಾ ಆಂದೋಲನ

ದೀಪಾವಳಿ ಅಂಗವಾಗಿ ಹಿರಿಯರ ಹಬ್ಬ ಆಚರಣೆ ಪ್ರಯುಕ್ತ ಹಿಂದೂ ರುದ್ರಭೂಮಿಯಲ್ಲಿ ಇಂದು ಬೆಳಗ್ಗೆ ಸ್ವಚ್ಛತಾ ಆಂದೋಲನ ಹಮ್ಮಿಕೊಳ್ಳಲಾಗಿದೆ. ನಗರದ ಸಂಘ ಸಂಸ್ಥೆಗಳು ಸ್ವ-ಇಚ್ಛೆಯಿಂದ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಳ್ಳಬಹುದು ಎಂದು ಪಾಲಿಕೆ ಮೇಯರ್ ಚಮನ್ ಸಾಬ್ ಮತ್ತು ಸದಸ್ಯ ಎ. ನಾಗರಾಜ್ ತಿಳಿಸಿದರು.

ನಗರದ ಸ್ವಚ್ಛತೆಗೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಮನೆಯ ಮುಂದೆ ಹಾಗೂ ರಸ್ತೆಗಳಲ್ಲಿ ವ್ಯರ್ಥ ಇಟ್ಟಿಗೆ ತುಂಡು, ಅನುಪಯುಕ್ತ ವಸ್ತು ಹಾಗೂ ಚೀಲಗಳಲ್ಲಿ ಕಟ್ಟಿಟ್ಟ ವಸ್ತುಗಳನ್ನು ತೆರವುಗೊಳಿಸುವಂತೆ ಸೂಚಿಸಲಾಗಿದೆ. ಇದನ್ನು ತೆಗೆಸಿದರೆ ನಗರವು ಶೇ.25ರಷ್ಟು ಸ್ವಚ್ಛವಾಗಲಿದೆ ಎಂದರು.

ಬೀದಿ ದೀಪಗಳ ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದ ಅವರು, ರುದ್ರಭೂಮಿಯಲ್ಲಿನ ಅವ್ಯವಸ್ಥೆಯ ಬಗ್ಗೆ ಪರಿಶೀಲಿಸಿ ಸಮಸ್ಯೆ ಬಗ್ಗೆ ಕ್ರಮ ಕೈ ಗೊಳ್ಳುವುದಾಗಿ ಮೇಯರ್ ಚಮನ್ ಸಾಬ್ ಹೇಳಿದರು.

# ಸಾರ್ವಜನಿಕ ರುದ್ರಭೂಮಿಯ ಅವ್ಯವಸ್ಥೆ : ಅಗತ್ಯ ಕ್ರಮಕ್ಕೆ ಆಗ್ರಹ



ದಾವಣಗೆರೆ, ಅ.30- ನಗರದ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿ ಅವ್ಯವಸ್ಥೆಯಿಂದ ಕೂಡಿದ್ದು, ಮಹಾನಗರ ಪಾಲಿಕೆಯು ತತ್‌ಕ್ಷಣವೇ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಆಗ್ರಹಿಸಿಸಿದ್ದಾರೆ.

ಈ ರುದ್ರಭೂಮಿಯು ಸ್ವಚ್ಛತೆ ಇಲ್ಲದೇ ದುರ್ವಾಸನೆಯಿಂದ ಕೂಡಿದೆ. ಮೂಲಭೂತ ಸೌಲಭ್ಯಗಳಿಲ್ಲ. ಪರಿಶುದ್ಧವಾದ ವಾತಾವರಣ ಇಲ್ಲ ಕಾರಣದಿಂದ ಶವ ಸಂಸ್ಕಾರಕ್ಕೆ ಬರುವ ಜನರಿಗೆ ಕಿರಿ-ಕಿರಿಯನ್ನುಂಟು ಮಾಡುತ್ತಿದೆ ಎಂದು ಅವರು ತಿಳಿಸಿದ್ದಾರೆ.

ರುದ್ರಭೂಮಿಯ ಅವ್ಯವಸ್ಥೆಯ ಬಗ್ಗೆ ಅನೇಕ ಬಾರಿ ಪಾಲಿಕೆಗೆ ಮನವಿ ಪತ್ರ ಸಲ್ಲಿಸಿದ್ದರೂ, ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಾಗರಾಜ್ ಅವರು ಕಿಡಿಕಾರಿದ್ದಾರೆ.

ಮಾಜಿ ಶಾಸಕರಾಗಿದ್ದ ದಿ. ಕಾಂ.ಪಂಪಾಪತಿ ಮತ್ತು ಹಿರಿಯ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರುಗಳು ನಗರಸಭೆ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಈ ರುದ್ರ ಭೂಮಿ ಮಾದರಿಯಾಗಿತ್ತು. ದುಃಖವನ್ನು ತುಂಬಿಕೊಂಡು ಬರುವ ಜನರು ಅಲ್ಲಿನ ಪರಿಸರವನ್ನು ಕಣ್ತುಂಬಿಕೊಂಡು ಸಮಾಧಾನದಿಂದ ವಾಪಸ್ ಹೋಗುವಷ್ಟರ ಮಟ್ಟಿಗೆ ರುದ್ರಭೂಮಿಯಲ್ಲಿ ಗಿಡ - ಮರಗಳನ್ನು ಬೆಳೆಸಿ, ಸ್ವಚ್ಛತೆಗೆ ಆದ್ಯತೆ ನೀಡಿದ್ದರು. ಆದರೆ, ಇದೀಗ ಅಲ್ಲಿನ ವಾತಾವರಣವನ್ನು ನೋಡಿ ತಮ್ಮ ದುಃಖ ಮತ್ತಷ್ಟು ತುಂಬಿ ಬರುವಂತೆ ನಿರ್ಮಾಣವಾಗಿದೆ ಎಂದು ಅವರು ವ್ಯಾಕುಲತೆ ವ್ಯಕ್ತಪಡಿಸಿದ್ದಾರೆ.

ಪಾಲಿಕೆ ಮಹಾಪೌರರು, ಆಯುಕ್ತರು, ಅಧಿಕಾರಿಗಳು ತಕ್ಷಣ ಈ ಬಗ್ಗೆ ಗಮನ ಹರಿಸುವಂತೆ ನಾಗರಾಜ್ ಒತ್ತಾಯಿಸಿದ್ದಾರೆ.

# ಜನರ ಗಮನ ಸೆಳೆದ ಸ್ವಸಹಾಯ ಸಂಘದ ಉತ್ಪನ್ನಗಳು



ದಾವಣಗೆರೆ, ಅ.30- ಆಕರ್ಷಕ ವಿದ್ಯುತ್ ದೀಪ, ವಿವಿಧ ವಿನ್ಯಾಸದ ಮಣ್ಣಿನ ಹಣತೆ ಮತ್ತು ಘಮಘಮಿಸುವ ಊದುಬತ್ತಿಗಳು ಭರ್ಜರಿಯಾಗಿ ದೀಪಾವಳಿ ಆಚರಿಸುವ ಯೋಜನೆ ಹೊತ್ತ ಜನರನ್ನು ತನ್ನೆಡೆಗೆ ಸೆಳೆಯುತ್ತಿದ್ದವು.

ಒಂದೆಡೆ ಕುರುಕಲು ತಿಂಡಿ ಮತ್ತು ಉಪ್ಪಿನಕಾಯಿ ಜನರ ಬಾಯಲ್ಲಿ ನೀರೂರಿಸಿದರೆ, ಇನ್ನೊಂದೆಡೆ ಕಂಗೊಳಿ ಸುವ ಭಿನ್ನ-ಭಿನ್ನ ಅಲಂಕಾರಿಕ ಹೂವಿನ ಮಾಲೆಗಳು ಎಲ್ಲರ ಮನ ಕರಗಿಸುತ್ತಿದ್ದವು.

ಸೆಣಬಿನ ಬ್ಯಾಗ್, ಸಿರಿಧಾನ್ಯದ ಬಿಸ್ಕೆಟ್, ವೈಯರ್ ಬ್ಯಾಗ್, ಉಲನ್ ತೋರಣ, ಬಾಗಿಲು ಪಡದೆ ಸೇರಿದಂತೆ ಇತರೆ ಅಲಂಕಾರಿಕ ವಸ್ತುಗಳು ಅಲ್ಲಿ ಮಾರಾಟ ಮಾಡಲ್ಪಟ್ಟವು.

ದೀಪಾವಳಿ ಹಬ್ಬದ ಪ್ರಯುಕ್ತ ಎನ್.ಆರ್. ಎಲ್.ಎಂ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬುಧವಾರ ಆಯೋಜಿಸಿದ್ದ ದೀಪ ಸಂಜೀವಿನಿ ಕಾರ್ಯಕ್ರಮದಲ್ಲಿ ಕಂಡು ಬಂದ ದೃಶ್ಯಗಳಿವು.

ನಗರದ ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್ ಬಟ್ಟೆ ಅಂಗಡಿ ಮುಂಭಾಗ ಹಾಕಿದ್ದ ಮಳಿಗೆಗೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಭೇಟಿ ನೀಡಿ, ಮಹಿಳೆಯರು ತಯಾರಿಸಿದ ಮಣ್ಣಿನ ಹಣತೆಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ ಖರೀದಿಸಲು ಮುಂದಾದರು.

ಬಸ್ ನಿಲ್ದಾಣದಲ್ಲಿ ಬೆಳಗ್ಗೆ ಜಿ.ಪಂ. ಯೋಜನಾ ನಿರ್ದೇಶಕಿ ರೇಷ್ಮಾ ಕೌಸೂರು ವಿದ್ಯುತ್ ದೀಪಾಲಂಕಾರ ಬೆಳಗಿಸಿ ಚಾಲನೆ ನೀಡಿ, ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿನ ಸ್ವ-ಸಹಾಯ ಸಂಘದ ಮಹಿಳೆಯರು ತಯಾರಿಸಿದ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡುವುದು ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಿಇಒ ಸುರೇಶ್ ಬಿ. ಇಟ್ನಾಳ್ ಅವರ ಮಾರ್ಗದರ್ಶನದಲ್ಲಿ ಜನ ದಟ್ಟಣೆ ಇರುವ ನಗರದ ಎರಡು ಪ್ರದೇಶಗಳಲ್ಲಿ ವ್ಯಾಪಾರ ಮಾಡಲು ಮಳಿಗೆಗೆ ಒಂದು ದಿನ ಅವಕಾಶ ಕಲ್ಪಿಸಿದ್ದೇವೆ ಎಂದರು.

20 ಕ್ಕೂ ಹೆಚ್ಚು ಸಂಜೀವಿನಿ ಸ್ವಸಹಾಯ ಸಂಘಗಳು ಭಾಗವಹಿಸಿದ್ದವು. ಸುಮಾರು 1,10,000/-ರೂಗಳವರೆಗೆ ಉತ್ಪನ್ನಗಳನ್ನು ಮಾರಾಟ ಮಾಡಿದರು.

ಈ ವೇಳೆ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಉಪಕಾರ್ಯದರ್ಶಿ ಕೃಷ್ಣನಾಯ್ಕ, ಡಿಪಿಎಂ ಭೋಜರಾಜ್, ಕೆಎಸ್‌ಆರ್‌ಟಿಸಿ ಡಿ.ಸಿ ಸಿದ್ದೇಶ್ ಹೆಬ್ಬಾಳ್, ಕೆಎಸ್‌ಆರ್‌ಟಿಸಿ ಡಿಎಂಇ ವೆಂಕಟೇಶ್ ಸೇರಿದಂತೆ, ಮತ್ತಿತರರಿದ್ದರು.

# ಹರಿಹರದಲ್ಲಿ ಪುನೀತ್ ಪುಣ್ಯ ಸ್ಮರಣೆ



ಹರಿಹರ, ಅ. 30 - ನಗರದ ಇಂದಿರಾ ನಗರ ಉದ್ಯಾನವನದ ಪುನೀತ್ ರಾಜಕುಮಾರ್ ಅಪ್ಪು ಅಭಿಮಾನಿ ಬಳಗದ ವತಿಯಿಂದ ಮೂರನೇ ವರ್ಷದ ಪುಣ್ಯ ಸ್ಮರಣೇಯ ಅಂಗವಾಗಿ ಪುನೀತ್ ರಾಜಕುಮಾರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಿದ್ದರು.

ಈ ಸಂದರ್ಭದಲ್ಲಿ ಅಪ್ಪು ಅಭಿಮಾನಿ ಬಳಗದ ಸಿದ್ದು ಬೇಡರ, ಮಟ್ಟೇರ ಸಿದ್ದೇಶ್, ಮಾರುತಿ ಬೇಡರ್, ಮೌನೇಶ್, ಸಂಜೀವ್, ಸುರೇಶ್, ರಾಜು, ಪ್ರಜ್ವಲ್, ಗಣೇಶ್, ನಿತಿನ್, ಸುನಿಲ್ ನಾಯ್ಕ ಹಾಗೂ ಅಪಾರ ಸಂಖ್ಯೆಯ ಅಭಿಮಾನಿಗಳು ಹಾಜರಿದ್ದು, ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದರು.

# ಜೈಲಿನಿಂದ ಹೊರ ಬಂದ ದರ್ಶನ್, ಪಟಾಕಿ ಸಿಡಿಸಿದ ಅಭಿಮಾನಿಗಳು

ಬೆಂಗಳೂರು, ಅ. 30 – ವೈದ್ಯಕೀಯ ಕಾರಣಗಳಿಗಾಗಿ ಹೈಕೋರ್ಟ್ ಜಾಮೀನು ನೀಡಿದ ನಂತರ ನಟ ದರ್ಶನ್ ಬಳ್ಳಾರಿ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಬಿಡುಗಡೆ ಸಂಭ್ರಮಿಸಿ ಅವರ ಅಭಿಮಾನಿಗಳು ಪಟಾಕಿ ಸಿಡಿಸಿದ್ದಾರೆ. ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ಬಳ್ಳಾರಿಯಲ್ಲಿರುವ ದುರ್ಗಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬಳ್ಳಾರಿ, ಬೆಂಗಳೂರು ಮತ್ತಿತರೆ ಕಡೆಗಳಲ್ಲಿ ದರ್ಶನ್ ಅವರ ನೂರಾರು ಅಭಿಮಾನಿಗಳು ದರ್ಶನ್ ಚಿತ್ರಗಳನ್ನು ಹಿಡಿದು ಸಂಭ್ರಮಿಸಿದರು. ಪಟಾಕಿ ಸಿಡಿಸಿ ಸಿಹಿ ಹಂಚಿದರು. ದರ್ಶನ್‌ಗೆ

### ಹರ್ಷ ವ್ಯಕ್ತಪಡಿಸಿದ ಸಚಿವ ಜಮೀರ್

ಮಧ್ಯಂತರ ಜಾಮೀನು ದೊರೆತಿರುವುದಕ್ಕೆ ವಸತಿ ಹಾಗೂ ವಕ್ಫ್ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಸಂತೋಷ ವ್ಯಕ್ತಪಡಿಸಿದ್ದಾರೆ.

ದರ್ಶನ್ ನನ್ನ ಹತ್ತಿರದ ಗೆಳೆಯ. ಸಹಜವಾಗಿಯೇ ನನಗೆ ಸಂತೋಷವಾಗಿದೆ. ಜೈಲಿನಲ್ಲಿದ್ದಾಗಲೂ ಭೇಟಿ ಮಾಡಿದ್ದೆ ಎಂದು ಖಾನ್ ಹೇಳಿದ್ದಾರೆ.

# ಪಟಾಕಿ ಹಾರಿಸುವಾಗ ಜಾಗೃತವಾಗಿರಿ : ಎಸ್ಸೆಸ್



ದಾವಣಗೆರೆ, ಅ.30- ನಗರದ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾ ಪಟಾಕಿ ವರ್ತಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಾಕಲಾಗಿರುವ ಪಟಾಕಿ ಅಂಗಡಿಗಳನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇಂದು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್, ಈ ಬಾರಿ ಮಳೆ ಮತ್ತು ಬೆಳೆ ಚೆನ್ನಾಗಿ ಆಗಿದೆ ಬಡ ಕೂಲಿ ಕಾರ್ಮಿಕರು ಬಡವರು ಸಂತೋಷದಿಂದ ದೀಪಾವಳಿ ಹಬ್ಬವನ್ನು ಆಚರಿಸಿ ಹಾಗೂ ಪಟಾಕಿ ಸಿಡಿಸುವಾಗ ಜಾಗೃತವಾಗಿರಿ ಎಂದು ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯ ತಿಳಿಸಿದರು.

ಈ ಸಂದರ್ಭದಲ್ಲಿ ಪಟಾಕಿ ಸಂಘದ ಗೌರವಾಧ್ಯಕ್ಷರೂ ಆದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಸಂಘದ ಶ್ರೀನಿವಾಸ್, ಸಿದ್ದಣ್ಣ, ರಮೇಶ್ ಗದ್ದಾಳೆ, ರಮೇಶ್ ಜಾಧವ್, ಪಾಂಡುರಂಗಪ್ಪ, ಶಿವು ಐನಳ್ಳಿ, ವೈ. ಮಲ್ಲೇಶ್ ರವಿಕುಮಾರ್, ಕಾಂತರಾಜ್, ರಾಜು, ಹಾಲೇಶಪ್ಪ, ಜಗನ್ನಾಥ್ ಮತ್ತಿತರರು ಇದ್ದರು.

# ಆಂಧ್ರ : 90 ನಿಮಿಷಗಳಲ್ಲಿ ಟಿಸಿಎಸ್ ಕ್ಯಾಂಪಸ್ ಸ್ಥಾಪನೆಗೆ ಒಪ್ಪಂದ

ಅಮರಾವತಿ, ಅ. 30 - ಟಿ.ಸಿ.ಎಸ್. ಕಂಪನಿಯು ವಿಶಾಖಪಟ್ಟಣಂನಲ್ಲಿ ಕ್ಯಾಂಪಸ್ ಸ್ಥಾಪಿಸಲು ಆಂಧ್ರಪ್ರದೇಶ ಸರ್ಕಾರದ ಜೊತೆ 90 ನಿಮಿಷಗಳಲ್ಲಿ ಒಪ್ಪಂದ ಮಾಡಿಕೊಂಡಿದೆ ಎಂದು ಆಂಧ್ರ ಸಚಿವ ನಾರಾ ಲೋಕೇಶ್ ತಿಳಿಸಿದ್ದಾರೆ.

ಅಮೆರಿಕದ ಲಾಸ್ ವೇಗಾಸ್‌ನಲ್ಲಿ ಆಯೋಜಿಸಿದ್ದ ಐ.ಟಿ. ಸರ್ವ್ ಅಲೈಯನ್ಸ್ ಸಿನರ್ಜಿ ಕಾನ್ಫರೆನ್ಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಲೋಕೇಶ್, ಸುಲಲಿತವಾಗಿ ಉದ್ಯಮ ನಡೆಸಲು ವ್ಯವಸ್ಥೆ ಕಲ್ಪಿಸುವುದು ಹಳೆಯದಾಯಿತು. ವೇಗವಾಗಿ ಉದ್ಯಮ ನಡೆಸಲು ವ್ಯವಸ್ಥೆ ಮಾಡುವುದು ಹೊಸ ಮಂತ್ರ ಎಂದು ಹೇಳಿದರು.

ಆಂಧ್ರಪ್ರದೇಶದ ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಎನ್‌.ಡಿ.ಎ. ಸರ್ಕಾರ ಈಗ ಸುಲಲಿತ ಆಡಳಿತವನ್ನು ಜನರಿಗೆ ಕಲ್ಪಿಸುತ್ತಿದೆ. ಹೀಗಾಗಿ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಅಪ್ರಸ್ತುತವಾಗಿದ್ದಾರೆ ಎಂದರು.

ನಾನು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರ್ ಅವರನ್ನು ಭೇಟಿ ಮಾಡಿದಾಗ, ನನಗೆ ಏನು ಸಲಹೆ ನೀಡುತ್ತೀರಿ ಎಂದು ಕೇಳಿದ್ದೆ. ಆಗ ಅವರು ವೇಗವಾಗಿ ಉದ್ಯಮ ನಡೆಸುವುದರ ಕಡೆ ಗಮನ ಹರಿಸಬೇಕಿದೆ ಎಂದಿದ್ದರು.

ಹೀಗಾಗಿ ವೇಗವಾಗಿ ಉದ್ಯಮ ಸೌಲಭ್ಯ ಕಲ್ಪಿಸುವುದೇ ನಮ್ಮ ಏಕೈಕ ಗುರಿಯಾಗಿದೆ. ಆಂಧ್ರ ಪ್ರದೇಶದಲ್ಲಿ ಹೂಡಿಕೆಗೆ ಸೂಕ್ತ ವಾತಾವರಣ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದಕ್ಕೆ ಒಂದು ಉದಾಹರಣೆ ಎಂದರೆ, ಟಿ.ಸಿ.ಎಸ್. ಜೊತೆಗಿನ ಒಪ್ಪಂದವನ್ನು ನಾವು 90 ನಿಮಿಷಗಳ ಭೇಟಿಯಲ್ಲಿ ಅಂತಿಮಗೊಳಿಸಿದ್ದೆವು. ಆಂಧ್ರಪ್ರದೇಶದಲ್ಲಿ ನಿಮಗೆ ಈ ರೀತಿಯ ಕೆಲಸ ಹಾಗೂ ಹೂಡಿಕೆ ಸಿಗಲಿದೆ ಎಂದು ಲೋಕೇಶ್ ಹೇಳಿದರು.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿ.ಸಿ.ಎಸ್.) ರಾಜ್ಯದಲ್ಲಿ ಐ.ಟಿ. ತಾಣ ಸ್ಥಾಪಿಸಲಿದೆ. ಈ ಕೇಂದ್ರದಲ್ಲಿ 10 ಸಾವಿರ ಜನ ಕಾರ್ಯನಿರ್ವಹಿಸಲಿದ್ದಾರೆ ಎಂದು ಲೋಕೇಶ್ ಇತ್ತೀಚೆಗೆ ತಿಳಿಸಿದ್ದರು.

ಕಾರ್ಪೊರೇಟ್‌ಗಳು ಯೋಜನೆಗಳಿಗೆ ಶತಕೋಟಿಗಟ್ಟಲೆ ಡಾಲರ್‌ಗಳನ್ನು ಖರ್ಚು ಮಾಡುತ್ತಾರೆ. ಕೇವಲ ಆರು ತಿಂಗಳು ಯೋಜನೆ ವಿಳಂಬವಾದರೂ ಉದ್ಯಮ ಹಳಿ ತಪ್ಪುತ್ತದೆ ಎಂದು ಲೋಕೇಶ್ ಹೇಳಿದರು.

ಭಾರತಕ್ಕೆ ಹೆಚ್ಚಿನ ಹೂಡಿಕೆ ಆಕರ್ಷಿಸಲು ರಾಷ್ಟ್ರ ಮಟ್ಟದಲ್ಲಿ ಸಾಕಷ್ಟು ನೀತಿಗಳ ಬದಲಾವಣೆಯ ಅಗತ್ಯವಿದೆ ಎಂದೂ ಅವರು ಹೇಳಿದರು.

ಆಂಧ್ರ ಪ್ರದೇಶ ಕೇವಲ ದೇಶದ ಇತರೆ ರಾಜ್ಯಗಳ ಜೊತೆಗಷ್ಟೇ ಅಲ್ಲದೇ, ವಿಯಟ್ನಾಂ ರೀತಿಯ ದೇಶಗಳ ಜೊತೆಗೂ ಹೂಡಿಕೆಗಾಗಿ ಸ್ಪರ್ಧೆ ನಡೆಸುತ್ತಿದೆ. ವಿಯಟ್ನಾಂ ಜೊತೆ ಎಲೆಕ್ಟ್ರಾನಿಕ್ಸ್ ಹೂಡಿಕೆ ಹಾಗೂ ಇಕ್ವೆಡಾರ್ ಜೊತೆ ಜಲ ಸರಕುಗಳ ರಫ್ತಿಗಾಗಿ ಸ್ಪರ್ಧೆ ನಡೆಸಲಾಗುತ್ತಿದೆ ಎಂದು ಲೋಕೇಶ್ ಹೇಳಿದರು.

ಡಾಟಾ ಸೆಂಟರ್‌ಗಳ ಮೇಲೆ ಜಾಗತಿಕವಾಗಿ 300 ಶತಕೋಟಿ ಡಾಲರ್ ಹೂಡಿಕೆ ಮಾಡಲಾಗುತ್ತಿದೆ. ಭಾರತಕ್ಕೆ 100 ಶತಕೋಟಿ ಡಾಲರ್ ಹೂಡಿಕೆ ತರುವುದು ಹಾಗೂ ಆಂಧ್ರದಲ್ಲಿ ಇದರ ಬಹುಭಾಗ ತರುವುದು ನಮ್ಮ ಗುರಿಯಾಗಿದೆ ಎಂದೂ ತಿಳಿಸಿದರು.






## ಮೂಲಭೂತ ಸೌಲಭ್ಯ ವಲಯದಲ್ಲಿ ಶೇ.2ರ ಬೆಳವಣಿಗೆ

ನವದೆಹಲಿ, ಅ. 30 - 8 ಪ್ರಮುಖ ಮೂಲಭೂತ ಸೌಲಭ್ಯ ವಲಯಗಳು ಸೆಪ್ಟೆಂಬರ್ ತಿಂಗಳಲ್ಲಿ ಶೇ.2ರಷ್ಟು ಬೆಳವಣಿಗೆ ಕಂಡಿವೆ. ಕಳೆದ ವರ್ಷ ಇದೇ ತಿಂಗಳಲ್ಲಿ ಶೇ.9.5ರ ಬೆಳವಣಿಗೆಯಾಗಿತ್ತು.

ಆಗಸ್ಟ್ ತಿಂಗಳಲ್ಲಿ ಈ ವಲಯಗಳು ಶೇಕಡ 1.6 ರಷ್ಟು ಕುಸಿತ ಕಂಡಿದ್ದವು. ಸೆಪ್ಟೆಂಬರ್ ತಿಂಗಳಲ್ಲಿ ಕಚ್ಚಾ ತೈಲ, ನೈಸರ್ಗಿಕ ಅನಿಲ ಹಾಗೂ ವಿದ್ಯುತ್ ವಲಯಗಳು ಕುಸಿತ ಕಂಡಿವೆ.

## ಬಂಗಾರದ ಬೆಲೆ ಸಾವಿರ ಹೆಚ್ಚಳ

ನವದೆಹಲಿ, ಅ. 30 – ದೀಪಾವಳಿ ಹಬ್ಬದ ದಿನಗಳ ಬೇಡಿಕೆಗಳ ಕಾರಣದಿಂದಾಗಿ 10 ಗ್ರಾಂ ಬಂಗಾರದ ಬೆಲೆ 1 ಸಾವಿರ ರೂ.ಗಳಷ್ಟು ಹೆಚ್ಚಾಗಿದ್ದು, 82 ಸಾವಿರ ರೂ.ಗಳ ಗಡಿ ದಾಟಿದೆ. ಇದೇ ಮೊದಲ ಬಾರಿಗೆ ಬಂಗಾರದ ಬೆಲೆ ಈ ಹಂತಕ್ಕೆ ತಲುಪಿದೆ.

ಆಲ್ ಇಂಡಿಯಾ ಸರಾಫ್ ಅಸೋಸಿಯೇಷನ್ ಪ್ರಕಾರ, ಬಂಗಾರದ ಬೆಲೆ ದೆಹಲಿಯಲ್ಲಿ 10 ಗ್ರಾಂಗಳಿಗೆ 82,400 ರೂ.ಗಳಿಗೆ ತಲುಪಿದೆ. ಕಳೆದ ವರ್ಷ ಇದೇ ದಿನದಂದು ಬಂಗಾರದ ಬೆಲೆ 61,200 ರೂ. ಆಗಿತ್ತು. ವರ್ಷದಲ್ಲೇ ಬಂಗಾರದ ಬೆಲೆಯಲ್ಲಿ ಶೇ.35ರಷ್ಟು ಹೆಚ್ಚಳವಾಗಿದೆ.













KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas